# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail:
belagavivarte1@gmail.com

Volume: 01 | Issue : 21 | SATURDAY 28-03-2026 | PRGI No : KNKAN/26/A0962 | Pages:4 Rs.2.00 | M: 9742418836


## ಬೆಂಗಳೂರು ಖ್ಯಾತಿ ಉಳಿಸಲು ಹಲವು ಯೋಜನೆ



ಬೆಂಗಳೂರು: ಬೆಂಗಳೂರು ವಿಶ್ವದರ್ಜೆಯ ನಗರವಾಗಿದ್ದು, ಇಲ್ಲಿನ ಸೌಲಭ್ಯಗಳನ್ನು ಮತ್ತಷ್ಟು ಮೇಲ್ದರ್ಜೇಗೆರಿಸಿ ಬೆಂಗಳೂರಿನ ಖ್ಯಾತಿಯನ್ನು ಉಳಿಸುವ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ರೂಪಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿಂದು ಹೇಳಿದರು.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ಬೆಂಗಳೂರಿನ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಹೊಸ ರಸ್ತೆ ನಿರ್ಮಾಣ, ಸುರಂಗ ರಸ್ತೆ ನಿರ್ಮಾಣ, ಎತ್ತರಿಸಿದ ರಸ್ತೆ ನಿರ್ಮಾಣ ಹೀಗೆ ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಬೆಂಗಳೂರಿನ ನಗರ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕ್ರಮವಹಿಸಿ ಹೊಸದಾಗಿ ಪಾರ್ಕಿಂಗ್ ನೀತಿ ಜಾರಿ ಮಾಡುತ್ತಿದ್ದೇವೆ ಎಂದು ಹೇಳಿದರು

ಬೆಂಗಳೂರಿನಲ್ಲಿ ಜನಸಂಖ್ಯೆ 1 ಕೋಟಿ 40 ಲಕ್ಷ ಇದ್ದು, ಈ ಜನಸಂಖ್ಯೆಗೆ ತಕ್ಕಂತೆ ರಸ್ತೆಗಳಿಲ್ಲ. ಬೆಂಗಳೂರಿನಲ್ಲಿರುವುದು ಶೇ. 8 ರಷ್ಟು ಮಾತ್ರ ರಸ್ತೆಗಳಿವೆ. ಇದು ಯೋಜಿತವಾಗಿ ರೂಪುಗೊಂಡಿರುವ ನಗರವಲ್ಲ. ಇಲ್ಲಿರುವ ವಾಹನಗಳ ಸಂಖ್ಯೆ 1 ಕೋಟಿ 30 ಲಕ್ಷ ಇದೆ. ಇದಕ್ಕೆಲ್ಲಾ ಪರಿಹಾರವೆಂದರೆ ಟನೆಲ್ ರಸ್ತೆ, ಎತ್ತರಿಸಿದ ರಸ್ತೆಗಳು ಹಾಗಾಗಿ ಈ ರಸ್ತೆ ಯೋಜನೆ ಮಾಡಿದ್ದೇವೆ. ಈಗಿರುವ ರಸ್ತೆಗಳ ಅಗಲೀಕರಣಕ್ಕಾಗಿ ಭೂ ಸ್ವಾಧೀನಕ್ಕೆ ಹೆಚ್ಚಿನ ವೆಚ್ಚವಾಗುತ್ತದೆ. ಹಾಗಾಗಿ ಪರ್ಯಾಯ ಮಾರ್ಗಗಳತ್ತ ಗಮನ ಹರಿಸಿದ್ದೇವೆ ಎಂದರು.

ಬೆಂಗಳೂರಿಗೆ ಒಳ್ಳೆಯ ಆಡಳಿತ ಸಿಗಬೇಕು ಎಂಬ ಕಾರಣಕ್ಕೆ ಐದು ಪಾಲಿಕೆಗಳನ್ನು ಮಾಡಿದ್ದೇವೆ. ಬೆಂಗಳೂರನ್ನು ವಿಭಜಿಸಲಿಲ್ಲ. ನಾಗರಿಕ ಕೇಂದ್ರೀತ ಆಡಳಿತ ಮತ್ತು ಹಣಕಾಸು ಸ್ವಾವಲಂಬಿ ಇರಲಿ ಎಂಬ ಕಾರಣಕ್ಕೆ ಐದು ನಗರ ಪಾಲಿಕೆಗಳನ್ನು ಮಾಡಲಾಗಿದೆ ಎಂದು ಅವರು ಹೇಳಿದರು.

ಬೆಂಗಳೂರಿನಲ್ಲಿ ನಾವು ತೆರಿಗೆ ಹೆಚ್ಚಳ ಮಾಡಿಲ್ಲ. ಹಿಂದೆ ಏನಿತ್ತೋ ಅದೇ ಆಸ್ತಿ ತೆರಿಗೆ ಮುಂದುವರೆದಿದೆ. ಆದರೆ ಆಸ್ತಿ ಸಂಗ್ರಹವನ್ನು ಹೆಚ್ಚು ಮಾಡಿದ್ದೇವೆ.. ಸುಮಾರು 1271 ಕೋಟಿ ರೂ.ಗಳಿಗೂ ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದಕ್ಕಾಗಿ ನಾವು ಕಾರಣವಲ್ಲ. ಓಟಿಎಸ್ ಯೋಜನೆ ಎಂದು ಅವರು ಹೇಳಿದರು.

ಬೆಂಗಳೂರನ್ನು ಯಾವುದೇ ನಗರಕ್ಕೆ ಹೋಲಿಸಲು ಸಾಧ್ಯವಿಲ್ಲ. ಇಡೀ ಜಗತ್ತಿನಲ್ಲಿ ಬೆಂಗಳೂರು 6ನೇ ಸ್ಥಾನದಲ್ಲಿದೆ. ಹೈದಾರಬಾದ್ 26 ನೇ ಸ್ಥಾನದಲ್ಲಿದೆ.

ಬೆಂಗಳೂರಿಗೆ ಬೇರೆ ನಗರಕ್ಕೂ ಹೋಲಿಕೆ ಬೇಡ. ನಾವು ನಮ್ಮ ನಗರದ ಮೂಲ ಸೌಕರ್ಯ ಅಭಿವೃದ್ಧಿಗೆ ಗಮನ ಕೊಟ್ಟಿದ್ದೇವೆ. ಟೀಕೆಗಳು ಬರಲಿ ಅವನ್ನು ಸ್ವಾಗತಿಸುತ್ತೇವೆ. ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ಎಂದು ಅವರು ಹೇಳಿದರು.

ಬೆಂಗಳೂರು ರಾಜ್ಯದ ಹೃದಯವಿದ್ದ ಹಾಗೆ ಹಾಗಾಗಿ ಬೆಂಗಳೂರಿನ ಅಭಿವೃದ್ಧಿಗೆ ಏನೆಲ್ಲಾ ಮಾಡಬೇಕು ಅದನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಓಟಿಸಿ ಸಮಸ್ಯೆ ಬಗ್ಗೆಯೂ ಸದಸ್ಯರು ಪ್ರಸ್ತಾಪಿಸಿದ್ದಾರೆ. ಈಗ 30ಘಿ40 ನಿವೇಶನದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಓಸಿ ಸಿಸಿ ವಿನಾಯ್ತಿ ನೀಡಿದ್ದೇವೆ. 40ಘಿ 60 ವಿಸ್ತೀರ್ಣದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದನ್ನು ಮುಂದಿನ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡುತ್ತೇವೆ. ಇ ಖಾತಾ ನೀಡಿಕೆಯಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಭರವಸೆ ನೀಡಿದ ಅವರು, ಇಲ್ಲಿ ಲಂಚ ಕೇಳಿದ ಅಧಿಕಾರಿಯನ್ನು ಅಮಾನತು ಮಾಡಿರುವುದಾಗಿಯೂ ಹೇಳಿದರು.

## ನೀತಿ ಸಂಹಿತೆ ಉಲ್ಲಂಘನೆ: 2.50 ಲಕ್ಷ ನಗದು ಜಪ್ತಿ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ–2026 ಹಿನ್ನಲೆಯಲ್ಲಿ ಬಾದಾಮಿ ತಾಲೂಕಿನ ಕುಳಗೇರಿ ಕ್ರಾಸ್ ಚೆಕ್‌ಪೋಸ್ಟನಲ್ಲಿ ದಾಖಲೆ ಇಲ್ಲದೇ ಕಾರನಲ್ಲಿ ಸಾಗಿಸುತ್ತಿದ್ದ 2.50 ಲಕ್ಷ ರೂ.ಗಳ ನಗದನ್ನು ಎಸ್‌ಎಸ್‌ಟಿ ಮತ್ತು ಎಫ್‌ಎಸ್‌ಟಿ ತಂಡ ವಶಕ್ಕೆ ಪಡೆದುಕೊಂಡಿದೆ.

ಕುಳಗೇರಿ ಚೆಕ್‌ಪೋಸ್ಟನಲ್ಲಿ ಆರ್.ಎಲ್.ನದಾಫ್ ನೇತೃತ್ವದ ಎಸ್.ಎಸ್.ಟಿ ತಂಡ ಹಾಗೂ ರಮೇಶ ಮಾಡಬಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಬುಧವಾರ ಸಂಜೆ ವಾಹನ ತಪಾಸಣೆ ವೇಳೆ ಹುಬ್ಬಳ್ಳಿಯಿಂದ ಗೋಕಾಕ್ ತಾಲೂಕಿನ ಕೌಜಲಗಿ ಕಡೆ ಹೊರಟಿದ್ದ ಕಾರ ತಪಾಸಣೆ ವೇಳೆ ನಗದು ಜಪ್ತಿ ಮಾಡಲಾಗಿದೆ.

ಬಾದಾಮಿ ತಾಲೂಕು ವ್ಯಾಪ್ತಿಯ ಜಾಲಿಹಾಳ ಚೆಕ್‌ಪೋಸ್ಟನಲ್ಲಿ ಪ್ರತ್ಯೇಜ ಎರಡು ಪ್ರಕರಣಗಳಲ್ಲಿ 64 ಸಾವಿರ ರೂ, ಮತ್ತು 75 ಸಾವಿರ ರೂ.ಗಳ ನಗದನ್ನು ಜಪ್ತಿ ಮಾಡಲಾಗಿದೆ. ಬಾಗಲಕೋಟೆ ತಾಲೂಕಿನ ಟಕ್ಕಳಕಿ ಚೆಕ್ ಪೋಸ್ಟನಲ್ಲಿ 65 ಸಾವಿರ ರೂ.ಗಳ ನಗದನ್ನು ಸಹ ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

### ಹೊನಕುಪ್ಪಿ ಜಾನಪದ ಜಾತ್ರೆ: ರಂಜಿಸಿದ ಕಲಾ ತಂಡಗಳು

## ‘ಜಾನಪದ ಕಲೆಗಳನ್ನು ಉಳಿಸಿ ಬೆಳೆಸಬೇಕು’



ಮೂಡಲಗಿ: ‘ನಾಡಿನ ಸಂಸ್ಕೃತಿಯ ತಾಯಿಬೇರುವಾಗಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವುದು ಕಲಾವಿದರು ಮತ್ತು ಸಮಾಜದ ಕೈಯಲ್ಲಿದೆ’ ಎಂದು ಚಂದ್ರಮ್ಮಾದೇವಿ ಕೈವಲ್ಯ ಮಠದ ಶರಣಬಸಪ್ಪ ಅಜ್ಜನವರು ಹೇಳಿದರು.

ತಾಲ್ಲೂಕಿನ ಹೊನಕುಪ್ಪಿ ಗ್ರಾಮದ ಚಂದ್ರಮ್ಮದೇವಿ ಕೈವಲ್ಯ ಮಠ ಆವರಣದಲ್ಲಿ ಧಾರವಾಡದ ಇಬ್ರಾಹಿಂ ಸುತಾರ ಸಾಮರಸ್ಯ ಸಾಂಸ್ಕೃತಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜರುಗಿದ ಜಾನಪದ ಜಾತ್ರೆ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು ಗ್ರಾಮೀಣ ಬದುಕಿನ ಉತ್ಸಾಹ ಇಮ್ಮಡಿಸುವ ಅಂತಿಪದ, ಲಾವಣಿ, ಸುಗ್ಗಿ, ಸೋಬಾನ, ಡೊಳ್ಳಿನ ಪದಗಳು ಮೊಬೈಲ್ ಹಾವಳಿಯಲ್ಲಿ ಮರೆಯಾಗುತ್ತಲಿವೆ. ಅವುಗಳನ್ನು ಉಳಿಸುವುದು ಎಲ್ಲ ಜವಾಬ್ದಾರಿಯಾಗಿದೆ ಎಂದರು.

ಜಾನಪದ ಕಲೆಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕಲಾವಿದ ಇಮಾಮಸಾಬ ವಲ್ಲಪ್ಪನವರ ಇಬ್ರಾಹಿಂ ಸುತಾರ ಸಾಮರಸ್ಯ ಸಾಂಸ್ಕೃತಿ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಜಾನಪದ ಕಲೆಗಳ ಪ್ರದರ್ಶನ ಮೂಲಕ ಉಳಿಸಿ ಬೆಳೆಸುತ್ತಿದ್ದಾರೆ. ಅವರ ಕಾರ್ಯವು ಶ್ಲಾಘನೀಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಕಾಶ ಹೆಗಡೆ ಮಾತನಾಡಿ ಜಾನಪದ ಕಲಾವಿದರಿಗೆ ಸರ್ಕಾರವು ಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಹೊನಕುಪ್ಪಿ ಗ್ರಾಮದ ಗಣ್ಯರು ಮತ್ತು ಭಕ್ತರು ಅತಿಥಿಯಾಗಿ ಭಾಗವಹಿಸಿದ್ದರು.

10 ಜಾನಪದ ಕಲಾ ತಂಡಗಳು ವೈವಿದ್ಯಮಯವಾದ ನೃತ್ಯ, ಹಾಡು, ಕುಣಿತಗಳ ಮೂಲಕ ಜನರನ್ನು ರಂಜಿಸಿದರು. ಜಾನಪದ ಲೋಕವನ್ನು ಅನಾವರಣಗೊಳಿಸಿದರು.

ಜಾನಪದ ಗಾಯಕ ನಿಂಗಪ್ಪ ದೊಡ್ಡ ಪೂಜಾರ ನಿರೂಪಿಸಿದರು.

## ರಾಜು ಕಿರಣಗಿ : ರಾಯಬಾಗಕ್ಕೆ ಈ ಬಾರಿ ಆಶಾಕಿರಣ!



**ವಿಶೇಷ ವರದಿ ಬೆಳಗಾವಿ ವಾರ್ತೆ**

**ರಾಯಬಾಗ** : ರಾಯಬಾಗ ವಿಧಾನಸಭಾ ಮತಕ್ಷೇತ್ರದಲ್ಲಿ 2028ಕೇ ಈ ಬಾರಿ ಬಿಜೆಪಿಯಿಂದ ಸ್ಪರ್ಧೆಗಿಳಿಯಲು ಯುವ ನಾಯಕ ಡಾ. ರಾಜು ಶಿವಾನಂದ ಕಿರಣಗಿ ಮುಂದಾಗಿದ್ದಾರೆ. ಕೇವಲ 35 ವರ್ಷ ವಯಸ್ಸಿನ ಅವರು ಉದ್ಯಮಿ ಹಾಗೂ ಸಮಾಜಸೇವಕರಾಗಿ ರಾಯಬಾಗ ವಿಧಾನಸಭಾ ಮತಕ್ಷೇತ್ರಾದ್ಯಂತ ಚಿರಪರಿಚಿತರಾಗಿದ್ದಾರೆ. ತಮ್ಮ ಸೇವಾ ಕಾರ್ಯಗಳಿಂದ ಅವರು ಅತ್ಯಂತ ಸಣ್ಣ ವಯಸ್ಸಿನಲ್ಲಿ ಕ್ಷೇತ್ರದಾದ್ಯಂತ ಸಂಚಲನ ಮೂಡಿಸಿದ್ದು ಭವಿಷ್ಯದ ಜನನಾಯಕರಾಗಿ ಕೆಲಸ ಮಾಡುವ ಆದಮ್ಯ ಉತ್ಸಾಹ ಅವರಲ್ಲಿದೆ.

ಯುವ ಬ್ರಿಗೇಡ್ ಕಾರ್ಯಕರ್ತರಾಗಿ, ಕರ್ನಾಟಕ ಜನ ಸೈನ್ಯ ಯುವ ಘಟಕದ ರಾಜ್ಯಾಧ್ಯಕ್ಷರಾಗಿ, ಶ್ರೀ ಸಂಗಮ ಫೌಂಡೇಶನ್ ಜಿಲ್ಲಾಧ್ಯಕ್ಷರಾಗಿ, ಮೇಜರ್ ಡಾ. ಪ್ರದೀಪ್ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿ, ಓಂ ಸಾಯಿ ಶಿಕ್ಷಣ ಮತ್ತು ಸಮಾಜ ಸೇವಾ ಪೌಂಡೇಶನ್ ಅಧ್ಯಕ್ಷರಾಗಿ, ಮಿರಿ ಪಿಕಲ್ಸ್ ಕನ್ಸಲ್ಟೆನ್ಸಿ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾಗಿ, ಪೂಜಾ ಕಂಪ್ಯೂಟರ್ ಮತ್ತು ತರಬೇತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕರಾಗಿ ಅವರು ಕಾರ್ಯನಿರ್ವಹಿಸಿದ್ದಾರೆ. ಇವುಗಳಲ್ಲದೆ ಇನ್ನೂ ಹತ್ತು ಹಲವು ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅವುಗಳ ಯಶಸ್ಸಿಗೆ ಶ್ರಮಿಸಿದ್ದಾರೆ.

ಬಿಜೆಪಿಯ ವಿಧಾನಸಭೆ, ವಿಧಾನ ಪರಿಷತ್, ಲೋಕ ಸಭೆ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಚುನಾವಣೆಗಳಲ್ಲಿ ಸಕ್ರಿಯ ವಾಗಿ ಪಾಲ್ಗೊಂಡು ಪಕ್ಷದ ಅಭ್ಯರ್ಥಿಗಳ ಪರ ಗೆಲುವಿಗೆ ದುಡಿದಿದ್ದಾರೆ. ಗ್ರಾಮೀಣ ಬಡ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣ ನೀಡಿದ ಶ್ರೇಯಸ್ಸು ಅವರಿಗಿದೆ. ಪ್ರವಾಹ ಪೀಡಿತ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಜನರ ನೆರವಿಗೆ ಧಾವಿಸಿ ಆಸರೆಯಾಗಿದ್ದಾರೆ. ಜಗತ್ತಿಗೆ ಕೊರೊನಾ ಮಹಾಮಾರಿ ಅಪ್ಪಳಿಸಿದ ಸಂದರ್ಭದಲ್ಲಿ ಅವರು ಹಳ್ಳಿ ಹಳ್ಳಿಗಳಿಗೆ ತೆರಳಿ ಜನರಿಗೆ ಬೇಕಾದ ಆಹಾರಧಾನ್ಯ ಆರ್ಥಿಕ ನೆರವು ಸೇರಿದಂತೆ ಇತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಮನೆ ಮಾತಾಗಿ ಗುರುತಿಸಿಕೊಂಡಿದ್ದರು. ಅವರ ಸಮಾಜ ಸೇವೆ ಗುರುತಿಸಿ ಹಲವಾರು ಪ್ರಶಸ್ತಿಗಳು, ಗೌರವ ಡಾಕ್ಟರೇಟ್ ಸಹ ಲಭಿಸಿದೆ.

2004 ರಲ್ಲಿ ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ಡಾ.ರಾಜು ಕಿರಣಗಿ ಅವರು ಹೋರಾಟಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಆನಂತರದ ದಿನಗಳಲ್ಲಿ ವಿದ್ಯಾರ್ಥಿಗಳು, ರೈತರು, ದೀನದಲಿತರ ಸಲುವಾಗಿ ಸಾಕಷ್ಟು ಹೋರಾಟಗಳಲ್ಲಿ ಅವರು ಧುಮುಕಿ ಸಮಾಜ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು.

ರಾಯಬಾಗ ತಾಲೂಕಿನ ಅತ್ಯಂತ ಪ್ರತಿಷ್ಠಿತ ಕಿರಣಗಿ ಮನೆತನದವರಾದ ರಾಜು ಕಿರಣಗಿ ಅವರು ಮೊದಲಿನಿಂದಲೂ ಸಮಾಜ ಸೇವೆಯಲ್ಲಿ ಬಹುದೊಡ್ಡ ಹೆಸರು ಮಾಡಿದ್ದಾರೆ. ರಾಜಕೀಯ ಪ್ರವೇಶದ ನಂತರ ಬಹುದೊಡ್ಡ ಕನಸು ಕಂಡಿರುವ ಅವರು ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಮೂಲಕ ಆರಿಸಿ ಬಂದು

ರಾಯಬಾಗ ವಿಧಾನ ಸಭಾ ಮತ ಕ್ಷೇತ್ರದಲ್ಲಿ ಬದಲಾವಣೆಯ ಹೊಸ ಪರ್ವಕ್ಕೆ ನಾಂದಿ ಹಾಡಬೇಕು ಎಂಬ ತವಕದಲ್ಲಿದ್ದಾರೆ. ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೊಂದಿರುವ ತಾಲೂಕಿನ ಕಳಂಕವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ತಮ್ಮದೇ ಆದ ಕನಸು ಕಂಡಿರುವ ರಾಜು ಕಿರಣಗಿ ಅವರು ಯುವಕರ ಪಡೆಯೊಂದಿಗೆ ತಾಲೂಕಿಗೆ ಅಗತ್ಯವಾದ ಮೂಲಭೂತ ಸೌಲಭ್ಯವನ್ನು ಕಲ್ಪಿಸಿ ಅಭಿವೃದ್ಧಿ ಹೊಳೆಯನ್ನೇ ಹರಿಸಲು ಸಂಕಲ್ಪಿಸಿದ್ದಾರೆ. ಭವಿಷ್ಯದಲ್ಲಿ ರಾಯಬಾಗ ಮತಕ್ಷೇತ್ರಕ್ಕೆ ಅತ್ಯಗತ್ಯವಾಗಿರುವ ಅನುದಾನವನ್ನು



ತಂದು ನೀರಾವರಿ, ಶಿಕ್ಷಣ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಸಮಗ್ರ ಅಭಿವೃದ್ಧಿ ಮಾಡಬೇಕು ಎಂಬ ಪಣತೊಟ್ಟಿದ್ದಾರೆ. ರಾಜು ಕಿರಣಗಿ ಅವರು ಬಿಜೆಪಿ ನಾಯಕರ ಜೊತೆ ಅತ್ಯುತ್ತಮ ಸ್ನೇಹ ಸಂಬಂಧ ಹೊಂದಿದ್ದಾರೆ. ಹೀಗಾಗಿ ರಾಯಬಾಗ ಮತಕ್ಷೇತ್ರದ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಇವರ ಹೆಸರು ಪ್ರಧಾನವಾಗಿ ಚರ್ಚೆಗೆ ಬಂದಿದೆ. ಬಿಜೆಪಿ ಕೋರ್ ಕಮಿಟಿ ಸಭೆಯಲ್ಲೂ ಸಹ ಇವರ ಹೆಸರು ಮುಖ್ಯವಾಗಿ ಚರ್ಚಿತಗೊಂಡಿದೆ. ಒಂದು ವೇಳೆ ರಾಯ ಬಾಗ ವಿಧಾನಸಭಾ ಮತಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ರಾಜು ಕಿರಣಗಿ ಅವರ ಮೂಲಕ ಬದಲಾವಣೆಗೆ ಮುಂದಾದರೆ ಯುವಕರು ಬಹುದೊಡ್ಡ ಅಂತರದಿಂದ ಬಿಜೆಪಿಯನ್ನು ಗೆಲ್ಲಿಸುವುದರಲ್ಲಿ ಯಾವ ಸಂದೇಹವು ಇಲ್ಲ. ಈ ಮೂಲಕ ಹೊಸ ಇತಿಹಾಸ ಸೃಷ್ಟಿಸುವುದರಲ್ಲಿ ಅನುಮಾನ ಇರದು.

## ಉಪ ಚುನಾವಣೆ : ಅಂತಿಮ ಕಣದಲ್ಲಿ 9 ಅಭ್ಯರ್ಥಿಗಳು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಗುರುವಾರದಂದು 14 ಅಭ್ಯರ್ಥಿಗಳ ಪೈಕಿ 5 ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯನ್ನು ಹಿಂಪಡೆದ್ದಿದ್ದು, ಅಂತಿಮವಾಗಿ ಚುನಾವಣಾ ಕಣದಲ್ಲಿ 9 ಅಭ್ಯರ್ಥಿಗಳು ಇದ್ದಾರೆಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

ಅಂತಿಮ ಚುನಾವಣಾ ಕಣದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಿಂದ ಉಮೇಶ ಹುಲ್ಲಪ್ಪ ಮೇಟಿ, ಭಾರತೀಯ ಜನತಾ ಪಾರ್ಟಿಯಿಂದ ಚರಂತಿಮಠ ವೀರಭದ್ರಯ್ಯ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಅಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮತಿಯಿಂದ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರದಿಂದ ಆನಂದ ಜಕಾತಿ, ರವಿ ಶಿವಪ್ಪ ಪಡಸಲಗಿ ಉಳಿದುಕೊಂಡಿದ್ದಾರೆ.

ಪಕ್ಷೇತರದಿಂದ ಗೋವಿಂದರಾಜ ಬಳ್ಳಾರಿ, ಅಬ್ದುಲ್‌ರಜಾಕ ಬಾಳೀಕಾಯಿ, ಆಯ್ಯುಬಖಾನ ಲಾಲಸಾಬ ಬಾಗೇವಾಡಿ, ಪ್ರಶಾಂತ ಶರಣಪ್ಪ ರಾವ ಹಾಗೂ ಯಂಕಪ್ಪ ಬಾಪಣ್ಣ ಕಮತಗಿ ಅವರು ತಮ್ಮ ನಾಮಪತ್ರವನ್ನು ಹಿಂಪಡೆದಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## 444 ಎಕರೆ ಅರಣ್ಯಭೂಮಿ ಮರು ವಶಕ್ಕೆ ಖಂಡ್ರೆ ಸೂಚನೆ

ಬೆಂಗಳೂರು: ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಶ್ರೀಗಂಧದ ಕಾವಲ್ ನಲ್ಲಿ ವಾಯುಪಡೆಯ ವಶದಲ್ಲಿರುವ 444 ಎಕರೆ ಅರಣ್ಯಭೂಮಿಯ ಮರು ವಶಕ್ಕೆ ಕೂಡಲೇ ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 64 ಎ ಅಡಿ ಪ್ರಕ್ರಿಯೆ ಆರಂಭಿಸಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಲಿಖಿತ ಸೂಚನೆ ನೀಡಿದ್ದಾರೆ.

ಈ ಸಂಬಂಧ ಅಪರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಎರಡು ಪ್ರತ್ಯೇಕ ಸೂಚನೆ ನೀಡಿರುವ ಅವರು, ಜಾರಕಬಂಡೆ ಕಾವಲ್ ಅರಣ್ಯ ಪ್ರದೇಶದಲ್ಲಿ ವಾಯುಪಡೆಗೆ ನೀಡಲಾಗಿದ್ದ 452ಎಕರೆ 4ಳಿಗಂಟೆ ಭೂ ಮಂಜೂರಾತಿಯನ್ನು ರಾಜ್ಯ ಸರ್ಕಾರ 2017ರ ಅಕ್ಟೋಬರ್ 09ರಂದು ರದ್ದುಗೊಳಿಸಿದ್ದು, ಇದನ್ನು ಅತ್ಯಗತ್ಯವಾದ ಶ್ವಾಸತಾಣವಾಗಿ ಉಳಿಸಲು ತೀರ್ಮಾನಿಸಲಾಗಿದ್ದು, ಕೂಡಲೇ ತೆರವಿಗೆ ಕ್ರಮ ವಹಿಸುವಂತೆ ಸೂಚಿಸಿದ್ದಾರೆ.

ರಾಷ್ಟ್ರೀಯ ಹಿತದ ದೃಷ್ಟಿಯಿಂದ ಭೂಮಂಜೂರಾತಿ ರದ್ದು ಪಡಿಸಿದ ಬಳಿಕವೂ ಭಾರತೀಯ ವಾಯುಪಡೆ ಸದರಿ ಭೂಮಿಯನ್ನು ಬಳಸಲು, ಅರಣ್ಯ (ಸಂರಕ್ಷಣಾ) ಕಾಯ್ದೆ–1980 ರಡಿಯಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಿ ಪರ್ಯಾಯ ಭೂಮಿ ನೀಡುವಂತೆ ತಿಳಿಸಿದ್ದರೂ ವಾಯುಪಡೆ ನಿಯಮ ಉಲ್ಲಂಘಿಸಿದೆ. ಈ ನಿಟ್ಟಿನಲ್ಲಿ 64ಎ ನೋಟಿಸ್ ನೀಡಿ ಒತ್ತುವರಿ ತೆರವು ಮಾಡಿಸಲು ಸೂಚಿಸಿದ್ದಾರೆ.

ಈ ಜಮೀನಿಗೂ ವಾಯುಪಡೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಈಶ್ವರ ಖಂಡ್ರೆ, ಇನ್ನು ಮುಂದೆ ಸದರಿ ಪ್ರದೇಶದಲ್ಲಿ ಅನಿವಾರ್ಯವಾಗಿ ಯಾವುದೇ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಾಗ ನಿಯಮಾನುಸಾರ ಅರಣ್ಯ ಇಲಾಖೆಯಿಂದ (ಪರಿವೇಶ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿ) ಅನುಮತಿ ಪಡೆಯುವಂತೆ ಸುತ್ತೋಲೆ ಹೊರಡಿಸಲು ಮತ್ತು ಎಲ್ಲ ಇಲಾಖೆಗಳಿಗೂ ಮಾಹಿತಿ ನೀಡಲು ಕ್ರಮ ವಹಿಸುವಂತೆಯೂ ನಿರ್ದೇಶನ ನೀಡಿದ್ದಾರೆ.



# ಆಧುನಿಕ ಯುಗದಲ್ಲಿಯೂ ಖದರ್ ಕಳೆದುಕೊಳ್ಳದ ಕುಸ್ತಿ



ಧಾರವಾಡ: ತಾಲೂಕಿನ ಉಪ್ಪಿನಬೆಟಗೇರಿ ಗ್ರಾಮದಲ್ಲಿ ಶ್ರೀಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ 3 ದಿನಗಳವರೆಗೆ ನಡೆದ ಬಯಲು ಕುಸ್ತಿ ಸ್ಪರ್ಧೆಗಳು ಇಂದಿನ ಆಧುನಿಕ ಯುಗದಲ್ಲಿಯೂ ಕುಸ್ತಿ ಕ್ರೀಡೆ ತನ್ನ ಖದರು ಕಳೆದುಕೊಂಡಿಲ್ಲ ಎಂಬ ಜನಪ್ರಿಯತೆಯನ್ನು ತೋರಿಸಿದೆ.

ಬಯಲು ಕುಸ್ತಿಯ ಕೊನೆಯ ದಿನವಾದ ಗುರುವಾರ ಸ್ಥಳೀಯ ಮೂರುಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಕುಸ್ತಿ ಸ್ಪರ್ಧೆಗೆ ಚಾಲನೆ ನೀಡಿ ಮಲ್ಲರಿಗೆ ಬೆನ್ನು ತಟ್ಟಿ ಹುರಿದುಂಬಿಸಿದರು. ಚಿಕ್ಕ ಮಕ್ಕಳು, ಯುವಕರು ತಮ್ಮ ಕುಸ್ತಿಯ ಹಲವಾರು ಕರಾಮತ್ತುಗಳನ್ನು ತೋರಿಸುತ್ತಿದ್ದರೆ ಕುಸ್ತಿಯು ಕ್ರೀಡಾಭಿಮಾನಿಗಳು ಮಲ್ಲರಿಗೆ ಸಿಳ್ಳೆ, ಕೇಕೆಯೊಂದಿಗೆ ಹುರಿದುಂಬಿಸುವ ಮೂಲಕ ಅಪ್ಪಟ ದೇಶೀಯ ಕ್ರೀಡೆ ಕುಸ್ತಿ ಯ ಜನಪ್ರಿಯತೆ ಇನ್ನೂ ಕುಂದಿಲ್ಲ ಎಂಬುದನ್ನು ಗ್ರಾಮದಲ್ಲಿ ಮೂರು ದಿನಗಳವರಗೆ ನಡೆದ ಬಯಲು ಕುಸ್ತಿಯು ಸಾಕ್ಷೀಕರಿಸಿತು.

ಈ ಬಯಲು ಕುಸ್ತಿ ಸ್ಪರ್ಧೆಯಲ್ಲಿ ಧಾರವಾಡ, ಬೆಳಗಾವಿ, ಗೋಕಾಕ, ರಾಯಬಾಗ, ಲಕ್ಕುಂಡಿ, ಕೋಗಿಲಗೇರಿ, ಹಿರೇಹೊನ್ನಳ್ಳಿ, ನರೇಂದ್ರ, ಪುಡಕಲಕಟ್ಟಿ, ಕಲ್ಲೂರ, ಕರಡಿಗುಡ್ಡ, ಲೋಕೂರ ಹೀಗೆ ನಾನಾ ಭಾಗಗಳಿಂದ ಆಗಮಿಸಿದ್ದ ನೂರಾರು ಕುಸ್ತಿಪಟುಗಳು ತಮ್ಮ ಕರಾಮತ್ತು ತೋರಿಸುವ ಮೂಲಕ ನೆರೆದಿದ್ದ ಜನರಿಗೆ ಕುಸ್ತಿ ಕಲೆಯ ರಸದೌತನ ನೀಡಿ ಕುಸ್ತಿಯ ಜೀವಂತಿಕೆಯನ್ನು ಪ್ರಚುರಪಡಿಸಿ ಇಂದಿನ ಯುವಕರಿಗೆ ಕುಸ್ತಿಯ ಮಹತ್ವ ಸಾರಿದರು.

# ವಿಶ್ವ ಗ್ರಾಹಕರ ದಿನಾಚರಣೆ



ಗದಗ: ಯುವ ಜನತೆಯಲ್ಲಿ ಗ್ರಾಹಕ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ ಹಾಗಾಗಿ "ಸುರಕ್ಷಿತವಾದ ಉತ್ಪನ್ನಗಳನ್ನು ಖರೀದಿಸಿದಾಗ ಮಾತ್ರ, ಆತ್ಮವಿಶ್ವಾಸದ ಗ್ರಾಹಕರು ಆಗಲಿಕ್ಕೆ ಸಾಧ್ಯ ಎಂದು ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್. ಹೇಳಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಹಾಗೂ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ, ಗದಗ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ 25 ರಂದು ಬುಧವಾರ ನಾಗಾವಿಯ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ ಕೌಶಲ್ಯ ವಿಕಾಸ ಭವನ ಗ್ರಾಮ ಗಂಗೋತ್ರಿ ಆವರಣದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾಮಟ್ಟದಲ್ಲಿ ಗ್ರಾಹಕರ ಹಿತರಕ್ಷಣೆಗಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಆಹಾರ ಸುರಕ್ಷತಾ ಅಧಿಕಾರಿ (ಅಂಕಿತ ಅಧಿಕಾರಿ) ಮತ್ತು ತೂಕ ಮಾಪನ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಇವರ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಯಾವುದೇ ವಸ್ತುವನ್ನು ಖರೀದಿಸುವಾಗ ISI, fSSia ಮುದ್ರೆಗಳು ಮತ್ತು ಮುಕ್ತಾಯ ದಿನಾಂಕವನ್ನು ಕಡ್ಡಾಯವಾಗಿ ಪರೀಕ್ಷಿಸಬೇಕು ಹಾಗೂ ಕಡ್ಡಾಯವಾಗಿ (ಧಣ) ಒಳಗೊಂಡ ರಶೀದಿಯನ್ನು ಕೇಳಿ ಪಡೆಯಬೇಕು. ಆನ್‌ಲೈನ್ ವೇದಿಕೆಗಳಲ್ಲಿ ವಸ್ತುಗಳನ್ನು ಖರೀದಿಸುವಾಗ ಅಧಿಕೃತ ರಶೀದಿಗಳು ಸರಿಯಾಗಿ ಲಭ್ಯವಿರುವುದಿಲ್ಲ, ಹಾಗಾಗಿ ಗ್ರಾಹಕರು ಹೆಚ್ಚು ಜಾಗರೂಕರಾಗಿರಬೇಕು ಎಂದರು.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಆಹಾರ ವಿತರಿಸುವ ಮುನ್ನ ಅಂಕಿತ ಅಧಿಕಾರಿಗಳಿಂದ ಆಹಾರದ ಮಾದರಿಯನ್ನು ತಪಾಸಣೆ ಮಾಡಿಸುವುದು ಕಡ್ಡಾಯವಾಗಿದೆ. ಕಲಬೆರಕೆ ಆಹಾರ ಅಥವಾ ತೂಕದಲ್ಲಿ ಮೋಸವಾದರೆ ಗ್ರಾಹಕರು ಯಾವುದೇ ಹಿಂಜರಿಕೆಯಿಲ್ಲದೆ ಕೇವಲ ಸಣ್ಣ ಕಾಗದದ ಮೂಲಕವಾದರೂ ಗ್ರಾಹಕರ ಆಯೋಗದಲ್ಲಿ ದೂರು ದಾಖಲಿಸಬಹುದು ಎಂದು ತಿಳಿಸಿದರು.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎ.ಜಿ. ಮಾಲ್ದಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಯಾವುದೇ ವಸ್ತುವನ್ನು ಖರೀದಿಸಿದರೂ ರಶೀದಿ ಪಡೆಯುವುದು ಗ್ರಾಹಕರ ಮೊದಲ ಕರ್ತವ್ಯ. ರಶೀದಿ ಇಲ್ಲದೆ ವಂಚನೆಗೊಳಗಾದರೆ, ಗ್ರಾಹಕ ನ್ಯಾಯಾಲಯದಲ್ಲಿ ದೂರು ದಾಖಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಒಂದನ್ನು ಕೊಂಡರೆ ಎರಡು ಉಚಿತ' ಎಂಬಂತಹ ಆಮಿಷಗಳಿಗೆ ಒಳಗಾಗುವ ಮುನ್ನ ಎಚ್ಚರ ವಹಿಸಬೇಕು. ಸಾಮಾನ್ಯವಾಗಿ ಅವಧಿ ಮುಗಿಯುತ್ತಿರುವ ಹತ್ತಿರವಿರುವ ವಸ್ತುಗಳನ್ನು ಈ ರೀತಿ ಮಾರಾಟ ಮಾಡಲಾಗುತ್ತದೆ. ವಸ್ತುಗಳ ಉತ್ಪಾದನಾ ದಿನಾಂಕ, ಮುಕ್ತಾಯ ದಿನಾಂಕ, ತೂಕ ಮತ್ತು ಅಳತೆಯನ್ನು ಪರಿಶೀಲಿಸುವುದು ಗ್ರಾಹಕರ ಮಾಹಿತಿ ಹಕ್ಕಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಕುಲಪತಿಗಳು (ಪ್ರ) ಮತ್ತು ಕುಲಸಚಿವ ಪೊ??. ಡಾ. ಸುರೇಶ ವಿ ನಾಡಗೌಡರ, ಡಿ ವೈ ಎಸ್ ಪಿ ಮಹಾಂತೇಶ್ ಸಜ್ಜನ್ , ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರಾದ ಎಸ್.ಜಿ.ಪಲ್ಲೇದ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಶ್ರೀಮತಿ ಯಶೋಧಾ ಪಾಟೀಲ, ಜಿಲ್ಲಾ ಕಾನೂನು ಪ್ರಾಧಿಕಾರ ಸದಸ್ಯ ಗುರುರಾಜ್.ಬಿ.ಗೌರಿ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಭೋದಕ ಹಾಗೂ ಭೋದಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಮಧು ಪ್ರಾರ್ಥನಾ ಗೀತೆ ಹಾಡಿದರು. ಆಹಾರ , ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಎಸ್.ಡಿ, ಪಾಟೀಲ ಸ್ವಾಗತಿಸಿದರು. ಸಾವಿತ್ರಿ ಪೂಜಾರ ಕಾರ್ಯಕ್ರಮ ನಿರೂಪಿಸಿದರು.

# ಪರಿಹಾರಕ್ಕೆ ಆಗ್ರಹಿಸಿ ಮನವಿ



ಶಿರಹಟ್ಟಿ: ಇತ್ತೀಚಿಗೆ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದ ಕಲ್ಲಂಗಡಿ ಸೇರಿದಂತೆ ತೋಟಗಾರಿಕಾ ಬೆಳೆಗಳನ್ನು ಕಳೆದುಕೊಂಡು ನಷ್ಟ ಅನುಭವಿಸುತ್ತಿರುವ ರೈತರಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಭಾರತೀಯ ಕಿಸಾನ್ ಸಂಘದ ವತಿಯಿಂದ ತಾಲೂಕ ಘಟಕದ ಅಧ್ಯಕ್ಷ ಚೆನ್ನಪ್ಪ ಷಣ್ಮುಖ ಅವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮನವಿ ಪತ್ರದಲ್ಲಿ ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ತಾಲೂಕಿನ ನೀರಾವರಿ ಸೌಲಭ್ಯ ಇರುವ ರೈತರು ಬೆಳೆದ ಕಲ್ಲಂಗಡಿ ಮತ್ತು ಪಪ್ಪಾಯಿ ಬೆಳೆ ಆಲಿಕಲ್ಲು ಮಳೆಗೆ ಹಾನಿಗೀಡಾಗಿದ್ದು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಆದಾಯ ನಿರೀಕ್ಷಿಸಿದ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದ್ದು ಕೂಡಲೇ ಜಿಲ್ಲಾ ಆಡಳಿತ ಕಂದಾಯ ಮತ್ತು ತೋಟಗಾರಿಕಾ ಇಲಾಖೆಯ ಮುಖಾಂತರ ಸಮೀಕ್ಷೆ ನಡೆಸಿ ರೈತರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಲಾಗಿದೆ.

ಮನವಿ ಪತ್ರ ಸ್ವೀಕರಿಸಿದ ಶಿರಹಟ್ಟಿ ಗ್ರೇಡ್ 2 ತಹಸಿಲ್ದಾರ್ ವಿ. ಎ. ಮುಳುಗುಂದ ಮಠ ಮತ್ತು ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಪ್ರಶಾಂತ ಕುಲಕರ್ಣಿ ಅವರು ಮನವಿಪತ್ರ ಸ್ವೀಕರಿಸಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ದೇವಪ್ಪ ವನಹಳ್ಳಿ, ವಿನೋದ ರೆಡ್ಡಿ, ವೆಂಕರೆಡ್ಡಿ, ಮಲ್ಲಪ್ಪ ಗಾಣಿಗೆರೆ, ಫಕೀರಪ್ಪ ಇಳಿಗೇರ, ಗೋಪಾಲ ಭರಮಗೌಡ್ರ, ಶರಣು ಅಂಗಡಿ, ಪೀರ್ ಸಾಬ್ ನದಾಫ, ಮಂಜುನಾಥ್ ಬಂಡಿ, ಸಿಬಿ ಅಂಗಡಿ, ಫಕೀರೇಶ ಕೋಳಿವಾಡ, ಬಸವರಾಜ್ ಮಲ್ಲಿಗೋಡ, ಮಂಜುನಾಥ್ ಭಜಂತ್ರಿ, ಎಲ್ಲಪ್ಪ ದೋಣಿ, ಬಸವರಾಜ ಬಡ್ನಿ ಸೇರಿದಂತೆ ಅನೇಕ ರೈತರಿದ್ದರು.

# ನಾಲತವಾಡ ಸರ್ಕಾರಿ ಆಸ್ಪತ್ರೆ ಅಭಿವೃದ್ಧಿಗೆ ಕೈಜೋಡಿಸಿದ ಆರೋಗ್ಯ ರಕ್ಷಾ ಸಮಿತಿ: ನೂತನ ಸದಸ್ಯರಿಗೆ ಅಭಿನಂದನೆ




ಮುದ್ದೇಬಿಹಾಳ: ನಾಲತವಾಡ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಸಂಜೆ ಆರೋಗ್ಯ ರಕ್ಷಾ ಸಮಿತಿಯ ನೂತನ ಸದಸ್ಯರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಸಮುದಾಯ ಆರೋಗ್ಯ ಕೇಂದ್ರದ ಅಭಿವೃದ್ಧಿ ಹಾಗೂ ಮೇಲ್ವಿಚಾರಣೆಗಾಗಿ ಸಮಿತಿಗೆ ಆಯ್ಕೆಯಾದ ಡಾ. ರಾಜೇಂದ್ರ ಗಲಗಲಿ, ಮಹ್ಮದ ಯೂನುಸ್ ಮೂಲಿಮನಿ, ಸಿದ್ದಣ್ಣ ಕಟ್ಟಿಮನಿ ಹಾಗೂ ವಿನೋದಾ ಅಮಾತಿಗೌಡ ಅವರನ್ನು ಆಸ್ಪತ್ರೆಯ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಸ್ಥಳೀಯರ ಪಾಲ್ಗೊಳ್ಳುವಿಕೆ ಅಗತ್ಯ: ಡಾ. ರಂಗನಾಥ ವೈದ್ಯ ಸನ್ಮಾನ ನೆರವೇರಿಸಿ ಮಾತನಾಡಿದ ವೈದ್ಯಾಧಿಕಾರಿ ಡಾ. ರಂಗನಾಥ ವೈದ್ಯ ಅವರು, "ಸರ್ಕಾರವು ಆರೋಗ್ಯ ರಕ್ಷಾ ಸಮಿತಿಗಳ ಮೂಲಕ ಆಸ್ಪತ್ರೆಗಳ ಅಭಿವೃದ್ಧಿಯಲ್ಲಿ ಸ್ಥಳೀಯರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತಿದೆ. ಆಸ್ಪತ್ರೆಯ ವ್ಯವಸ್ಥೆಯನ್ನು ಸುಧಾರಿಸಲು, ರೋಗಿಗಳಿಗೆ ಗುಣಮಟ್ಟದ ಸೌಲಭ್ಯ ಒದಗಿಸಲು ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಮಿತಿ ಸದಸ್ಯರ ಪಾತ್ರ ಅತ್ಯಂತ ಪ್ರಮುಖವಾಗಿದೆ," ಎಂದು ತಿಳಿಸಿದರು.

ಜವಾಬ್ದಾರಿ ನಿರ್ವಹಣೆಯ ಭರವಸೆ

ಸಮಿತಿ ಸದಸ್ಯ ಸಿದ್ದಣ್ಣ ಕಟ್ಟಿಮನಿ ಮಾತನಾಡಿ, "ಶಾಸಕರಾದ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರು ನಮ್ಮ ಮೇಲೆ ನಂಬಿಕೆಯಿಟ್ಟು ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತೇವೆ. ಆಸ್ಪತ್ರೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮತ್ತು ರೋಗಿಗಳಿಗೆ ಉತ್ತಮ ಸೇವೆ ಸಿಗುವಂತೆ ಮಾಡಲು ಶ್ರಮಿಸುತ್ತೇವೆ," ಎಂದು ಭರವಸೆ ನೀಡಿದರು.

ಮತ್ತೊಬ್ಬ ಸದಸ್ಯ ಡಾ. ರಾಜೇಂದ್ರ ಗಲಗಲಿ ಮಾತನಾಡಿ, ವೈದ್ಯಾಧಿಕಾರಿ ಡಾ. ರಂಗನಾಥ ವೈದ್ಯ ಅವರ ಜನಪರ ಸೇವೆಯನ್ನು ಶ್ಲಾಘಿಸಿದರು ಹಾಗೂ ಸಮಿತಿಯ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಆರೋಗ್ಯ ಕೇಂದ್ರದ ವೈದ್ಯರು, ಶುಶ್ರೂಷಕರು, ಸಿಬ್ಬಂದಿ ವರ್ಗ ಹಾಗೂ ಪಟ್ಟಣದ ಪ್ರಮುಖ ಸಾರ್ವಜನಿಕರು ಸೇರಿದಂತೆ ಉಪಸ್ಥಿತರಿದ್ದರು.



ಹುಬ್ಬಳ್ಳಿ ಮಹಾನಗರ ಆದ್ಯಂತ ಇಂದು ವೈಭವದಿಂದ ರಾಮನವಮಿಯನ್ನು ಆಚರಿಸಲಾಯಿತು. ನಗರದ ಮರಾಠಾ ಗಲ್ಲಿಯಲ್ಲಿರುವ ಹನುಮನ ಮಂದಿರದಲ್ಲಿ ಮಹಿಳೆಯರು ಶ್ರೀ ರಾಮನಿಗೆ ತೊಟ್ಟಿಲಲ್ಲಿ ಹಾಕಿ ರಾಮನವಮಿಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಮರಾಠಾ ಶ್ರೀ ಭಾರತಿ ಮಠ ಟ್ರಸ್ಟ್ ಸಮಿತಿಯ ಕಾರ್ಯದರ್ಶಿ ನಾರಾಯಣ ವೈದ್ಯ. ಧರ್ಮದರ್ಶಿ ಬಸವಂತ ಸಿಂದೆ. ಮಂದಿರದ ವ್ಯವಸ್ಥಾಪಕ ಹನುಮಂತ ಆರ್ಯರ ಭಕ್ತರು ಉಪಸ್ಥಿತರಿದ್ದರು.



ಹಾನಗಲ್ ತಹಶೀಲ್ದಾರ್ ಕಚೇರಿಯಲ್ಲಿ ವಿವಿಧ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು. ತಹಶೀಲ್ದಾರ್ ರೇಣುಕಾ ಎಸ್., ಪುರಸಭೆ ಮಾಜಿ ಅಧ್ಯಕ್ಷರಾದ ರಾಧಿಕಾ ದೇಶಪಾಂಡೆ, ಮಮತಾ ಆರೆಗೊಪ್ಪ, ಮುಖ್ಯಾಧಿಕಾರಿ ವೈ.ಕೆ.ಜಗದೀಶ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಈರಣ್ಣ ಬೈಲವಾಳ, ಸುರೇಶ ಮುಸುರಿ, ಲೋಕೋಪಯೋಗಿ ಇಲಾಖೆಯ ಎಇಇ ಎಸ್.ದೇವರಾಜು ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಸಾವಿನಲ್ಲೂ ಸಾರ್ಥಕತೆ: ಅಂಧರ ಬಾಳಿಗೆ ಬೆಳಕಾದ ಮುದ್ದೇಬಿಹಾಳದ ಹತ್ತು ವರ್ಷದ ಬಾಲಕ ಆಕಾಶ



ಮುದ್ದೇಬಿಹಾಳ: ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಡವಳಗಿ ಗ್ರಾಮದ ಪುಟ್ಟ ಬಾಲಕನೊಬ್ಬ ತನ್ನ ಸಾವಿನ ನಂತರವೂ ಇಬ್ಬರ ಕಣ್ಣುಗಳಿಗೆ ಬೆಳಕಾಗುವ ಮೂಲಕ ಮಾನವೀಯತೆಯ ಮೌಲ್ಯವನ್ನು ಸಾರಿದ ಹೃದಯಸ್ಪರ್ಶಿ ಘಟನೆ ಜಿಲ್ಲೆಯಲ್ಲಿ ನಡೆದಿದೆ.

**ಘಟನೆಯ ಹಿನ್ನೆಲೆ** ತಾಲೂಕಿನ ಡವಳಗಿ ಗ್ರಾಮದ ಮಲ್ಲಪ್ಪ ಹರಿಜನ ಹಾಗೂ ಸುಜಾತಾ ದಂಪತಿಯ ಏಕೈಕ ಪುತ್ರ ಆಕಾಶ ಹರಿಜನ (10), ಮಾರ್ಚ್ 22ರಂದು ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದನು. ತಕ್ಷಣವೇ ಬಾಲಕನನ್ನು ವಿಜಯಪುರದ ಬಿ.ಎಲ್.ಡಿ.ಇ (BLDE) ಆಸ್ಪತ್ರೆಗೆ ದಾಖಲಿಸಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಾರ್ಚ್ 25ರಂದು ಬಾಲಕನ ಮೆದುಳು ನಿಷ್ಕ್ರಿಯಗೊಂಡಿದೆ (ಬ್ರೇನ್ ಡೆಡ್) ಎಂದು ವೈದ್ಯರು ಘೋಷಿಸಿದರು.

ಪೋಷಕರ ಅನುಕರಣೀಯ ನಿರ್ಧಾರ

ತಮ್ಮ ಏಕೈಕ ಪುತ್ರನನ್ನು ಕಳೆದುಕೊಂಡ ದುಃಖದ ನಡುವೆಯೂ ಪೋಷಕರು ಅತ್ಯಂತ ಧೈರ್ಯದ ಮತ್ತು ಮಾನವೀಯತೆಯ ನಿರ್ಧಾರ ಕೈಗೊಂಡಿದ್ದಾರೆ. ಮೊದಲು ಅಂಗಾಂಗ ದಾನಕ್ಕೆ ಮುಂದಾದರಾದರೂ, ಅಪಘಾತದ ತೀವ್ರತೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಕೊನೆಗೆ "ನಮ್ಮ ಮಗನ ದೇಹ ಮಣ್ಣಾಗುವ ಬದಲು ಇನ್ನೊಬ್ಬರ ಬದುಕಿಗೆ ಬೆಳಕಾಗಲಿ" ಎಂಬ ಉದಾತ್ತ ಉದ್ದೇಶದಿಂದ ಬಾಲಕನ ನೇತ್ರಗಳನ್ನು ದಾನ ಮಾಡಲು ಒಪ್ಪಿಗೆ ನೀಡಿದರು.

**ಸಮಾಜಕ್ಕೆ ಮಾದರಿ:** ಬಾಲಕನ ಎರಡು ಕಣ್ಣುಗಳನ್ನು ದಾನ ಮಾಡಲಾಗಿದ್ದು, ಇದರಿಂದ ಇಬ್ಬರು ಅಂಧ ವ್ಯಕ್ತಿಗಳಿಗೆ ದೃಷ್ಟಿ ದೊರೆಯಲಿದೆ. ಮೃತ ಆಕಾಶ ತಂದೆ–ತಾಯಿಗೆ ಒಬ್ಬನೇ ಮಗನಾಗಿದ್ದು, ಇಬ್ಬರು ಸಹೋದರಿಯರನ್ನು ಅಗಲಿದ್ದಾನೆ. ಮಗನ ಅಗಲಿಕೆಯ ನೋವಿನಲ್ಲೂ ಪೋಷಕರು ತೋರಿದ ಈ ತ್ಯಾಗಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ಪ್ರಶಂಸೆ ವ್ಯಕ್ತವಾಗಿದೆ. **ಗಣ್ಯರ ಶ್ಲಾಘನೆ:** ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತ ಮಂಡಳಿ, ವೈದ್ಯಕೀಯ ಸಿಬ್ಬಂದಿ ಹಾಗೂ ರಾಷ್ಟ್ರೀಯ ದೇಹಾಂಗ ದಾನ ಜಾಗೃತಿ ಸಮಿತಿಯ ಜಿಲ್ಲಾ ಸಂಚಾಲಕ ಪ್ರೀತು ದಶವಂತ ಅವರು ಕುಟುಂಬದ ಈ ನಿರ್ಧಾರವನ್ನು ಶ್ಲಾಘಿಸಿ ದ್ದಾರೆ. "ಸಾವಿನಲ್ಲೂ ಸಾರ್ಥಕತೆ ಕಾಣಬಹುದು ಎಂಬ ಸಂದೇಶವನ್ನು ಈ ಕುಟುಂಬ ಸಮಾಜಕ್ಕೆ ನೀಡಿದೆ," ಎಂದು ಅವರು ಬಾಲಕನಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಈ ಘಟನೆಯು ಡವಳಗಿ ಗ್ರಾಮದ ಜನತೆಗೆ ಮಾತ್ರವಲ್ಲದೆ ಇಡೀ ಜಿಲ್ಲೆಗೆ ಪ್ರೇರಣೆಯಾಗಿದೆ.



ಮುನವಳ್ಳಿ ಕಟಕೋಳ ಗ್ರಾಮದ ಶ್ರೀ ರಾಮ ಯುವಕ ಮಂಡಳಿಯವರಿಂದ ಗುರುವಾರ ಬಸ್ಟ್ಯಾಂಡ ಶ್ರೀರಾಮ ವೃತ್ತದಲ್ಲಿ ರಾಮ ನವಮಿಯ ಅಂಗವಾಗಿ ಶ್ರೀ ರಾಮ ಮೂರ್ತಿಗೆ ಹೂವಿನಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿ ಶ್ರೀ ರಾಮ ನವಮಿ ಆಚರಿಸಲಾಯಿತು. ಯುವಕ ಮಂಡಳದ ಸರ್ವ ಸದಸ್ಯರು ಸಾರ್ವಜನಿಕರು ಉಪಸ್ಥಿತರಿದ್ದರು.

# ಜನಗಣತಿ– 2027; ಏಪ್ರಿಲ್ 1 ರಿಂದ ಪೋರ್ಟಲ್‌ನಲ್ಲಿ ಮಾಹಿತಿ ದಾಖಲೆಗೆ ಅವಕಾಶ
# ಸರಿಯಾದ ಮಾಹಿತಿ ಒದಗಿಸಿ ದೇಶದ ಪ್ರಗತಿಗೆ ಸಹಕರಿಸಿ: ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್



ಗದಗ: 2027 ರ ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಏಪ್ರಿಲ್ 1 ರಿಂದ 15 ರವರೆಗೆ ಸಾರ್ವಜನಿಕರು ಎಂದರೆ ( self enumerator ) ಸ್ವಯಂ ಎಣಿಕೆದಾರರು ತಮ್ಮ ಮಾಹಿತಿಯನ್ನು ಸ್ವಯಂ ಆಗಿ ಆನ್‌ಲೈನ್ ಪೋರ್ಟಲ್ ( se.census.gov.in ) ನಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜನಗಣತಿ 2027ರ ಕುರಿತು ಜರುಗಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಸಂಪೂರ್ಣ ಡಿಜಿಟಲ್ ಮಾದರಿಯಲ್ಲಿ ( ಅಪ್ ಮೂಲಕ) ನಡೆಯಲಿರುವ ಈ ಜನಗಣತಿ ಕಾರ್ಯಕ್ಕಾಗಿ ಜಿಲ್ಲೆಯಾದ್ಯಂತ ಅಧಿಕಾರಿಗಳ ತಂಡ ರಚನೆ ಹಾಗೂ ತರಬೇತಿ ಪ್ರಕ್ರಿಯೆಗಳು ಭರದಿಂದ ಸಾಗಿವೆ. ಈ ಬಾರಿಯ ಜನಗಣತಿಯ ವಿಶೇಷತೆಯೆಂದರೆ, ಸಾರ್ವಜನಿಕರು ಖುದ್ದಾಗಿ ಪೋರ್ಟಲ್ ಮೂಲಕ ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್ 1 ರಿಂದ ಏಪ್ರಿಲ್ 15 ರವರೆಗೆ ಸಾರ್ವಜನಿಕರು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು ಎಂದರು.

ಏಪ್ರಿಲ್ 16 ರಿಂದ ಮೇ 15 ರ ಒಂದು ತಿಂಗಳ ಅವಧಿಯಲ್ಲಿ ನಿಯೋಜಿಸಿದ ಗಣತಿದಾರರು ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆಯು ನಡೆಯಲಿದೆ. ಪ್ರತಿ ಮನೆಗೆ ಹಾಜರಾಗಿ ಕುಟುಂಬಸ್ಥರಿಂದ ಗಣತಿದಾರರು ಮಾಹಿತಿ ಸಂಗ್ರಹಿಸಲಿದ್ದು ಆ ಸಂದರ್ಭದಲ್ಲಿ ಸಾರ್ವಜನಿಕರು ಸಂಬಂಧಿತ ಮಾಹಿತಿಯನ್ನು ಗಣತಿದಾರ ರಿಗೆ ಒದಗಿಸಬೇಕು. ಗಣತಿದಾರರಿಗೆ ಕುಟುಂಬದ ಮುಖ್ಯಸ್ಥರ ಆಧಾರ ಕಾರ್ಡ್ ಗೆ ಜೊಡಣೆಯಾದ ಮೊಬೈಲ್ ಸಂಖ್ಯೆ ಹಾಗೂ ಆದಾರ ಕಾರ್ಡ ಸಂಖ್ಯೆ ನೀಡಬೇಕು.

ಸರಿಯಾದ ಮಾಹಿತಿ ಆಧಾರದ ಮೇಲೆ ದೇಶದ ಅಭಿವೃದ್ಧಿಗೆ ಯೋಜನೆ ರೂಪಿಸಲು ಇದು ಅನುಕೂಲವಾಗುತ್ತದೆ ಎಂದರು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜನಗಣತಿ ಸಮಿತಿ ರಚಿಸಲಾಗಿದೆ. ಜಿಲ್ಲಾ ಜನಗಣತಿ ಸಮಿತಿಯು ಹೆಚ್ಚುವರಿ ಪ್ರಧಾನ ಜನಗಣತಿ ಅಧಿಕಾರಿಯಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಜನಗಣತಿ ಅಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಯನ್ನು ಉಪವಿಭಾಗ ಜನಗಣತಿ ಅದಿಕಾರಿ ಹಾಗೂ ಹೆಚ್ಚುವರಿ ಜನಗಣತಿ ಅಧಿಕಾರಿಗಳನ್ನಾಗಿ ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಯೋಜನಾ ನಿರ್ದೇಶಕರು ಮತ್ತು ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಇವರನ್ನು ನೇಮಿಸಲಾಗಿದೆ.

ಜಿಲ್ಲಾ ಹಂತದಿಂದ ಪ್ರತಿ ತಾಲೂಕು ತಹಶೀಲ್ದಾರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಗರ ಸಭೆಯ ಆಯುಕ್ತರು, ಪುರಸಭೆ ಮುಖ್ಯಾಧಿಕಾರಿ ಮತ್ತು ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ಅವರನ್ನು ಚಾರ್ಜ ಆಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಇಬ್ಬರು ಜಿಲ್ಲಾ ಮಟ್ಟದ ತರಬೇತಿದಾರರು, 38 ಕ್ಷೇತ್ರ ಮಟ್ಟದ ತರಬೇತಿದಾರರು ಹಾಗೂ ಪ್ರತಿ ಗ್ರಾಮಾಂತರ ಮತ್ತು ನಗರ ವ್ಯಾಪ್ತಿಗೆ ಒಬ್ಬ ತಾಂತ್ರಿಕ ಸಿಬ್ಬಂದಿಯನ್ನು ಆಯ್ಕೆ ಮಾಡಲಾಗಿದೆ. ಸಂಬಂಧಿತ ಚಾರ್ಜ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಜನಗಣತಿ ಕಾರ್ಯ ಕೈಗೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ ಎಂದರು.

ಜನಗಣತಿ ಕಾರ್ಯವು ಮೊದಲ ಹಂತದಲ್ಲಿ ಮನೆ ಗಣತಿ ಕೈಗೊಳ್ಳಲಾಗುತ್ತಿದ್ದು 150 ರಿಂದ 200 ಕುಟುಂಬಗಳು ಅಥವಾ ಅಂದಾಜು 700– 800 ಜನಸಂಖ್ಯೆಗೆ ಅನುಗುಣವಾಗಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಒಂದು ಗಣತಿ ಬ್ಲಾಕ್ ರಚಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು, ಕರ ವಸೂಲಿಗಾರರು, ಜಲಗಾರರು, ನಗರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ/ ಸಿಬ್ಬಂದಿಗಳು ಗ್ರಾಮ, ವಾರ್ಡ ತಾಲೂಕು ವಿಭಾಗದಂತೆ ಬ್ಲಾಕ್ ರಚನೆಯ ಕಾರ್ಯನಿರ್ವಹಿಸಿರುತ್ತಾರೆ. ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿ ಒಟ್ಟು 1905 ಗಣತಿ ಬ್ಲಾಕ್ ಗಳು ರಚನೆಯಾಗಿವೆ.

**ಆ ಪೈಕಿ ತಾಲೂಕುವಾರು ವಿವರ ಇಂತಿದೆ:** ಗದಗ – 658. ನರಗುಂದ– 175, ಶಿರಹಟ್ಟಿ– 160, ಮುಂಡರಗಿ– 242, ಗಜೇಂದ್ರಗಡ–228, ಲಕ್ಷ್ಮೇಶ್ವರ– 196, ರೋಣ –246 ಸೇರಿದಂತೆ 1905 ಗಣತಿ ಬ್ಲಾಕ್ ಗಳು ರಚನೆಯಾಗಿವೆ. ಈ ಜನಗಣತಿಯಲ್ಲಿ ಪ್ರತ್ಯೇಕವಾಗಿ 90 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿದೆ.

**ಜನಗಣತಿ ಕಾರ್ಯಕ್ಕೆ ಅಗತ್ಯವಿರುವ ಗಣತಿದಾರರು ಮತ್ತು ಮೇಲ್ವಿಚಾರಕರು :** ಗಣತಿ ಕಾರ್ಯಕ್ಕೆ ಶಿಕ್ಷಣ ಇಲಾಖೆಯ ಶಿಕ್ಷಕರು ( ಸರ್ಕಾರಿ ಮತ್ತು ಅನುದಾನಿತ ) ಶಿಶು ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತರು, ನಿಲಯ ಮೇಲ್ವಿಚಾರಕರು ಮತ್ತು ಇತರೇ ಇಲಾಖೆಯ ಪ್ರಥಮ ಮತ್ತು ದ್ವಿತೀಯ ದರ್ಜೆಯ ಸಹಾಯಕರು/ ಸಿಬ್ಬಂದಿಗಳನ್ನು ಗಣತಿದಾರರನ್ನಾಗಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು/ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಸಹ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಅಧಿಕಾರಿಗಳನ್ನು ಕನಿಷ್ಟ 6 ಜನ ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನಾಗಿ ನಿಯೋಜಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ 298 ಮೇಲ್ವಿಚಾರಕರು, 1480 ಗಣತಿದಾರರು, 1205 ಎಚ್ ಎಲ್ ಬಿಗಳು ಕಾರ್ಯನಿರ್ವಹಿಸಲಿದ್ದಾರೆ. ಪಟ್ಟಣ ಪ್ರದೇಶದಲ್ಲಿ 134 ಮೇಲ್ವಿಚಾರಕರು, 744 ಗಣತಿದಾರರು , 701 ಎಚ್ ಎಲ್ ಬಿಗಳು ಕಾರ್ಯನಿರ್ವಹಿಸಲಿದ್ದಾರೆ.

ಈಗಾಗಲೇ ಇಬ್ಬರು ಮಾಸ್ಟರ್ ಟ್ರೆನರ್‌ಗಳಿಗೆ ತರಬೇತಿ ನೀಡಲಾಗಿದ್ದು, ಇವರು ತಾಲೂಕು ಮತ್ತು ನಗರ ಮಟ್ಟದ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ತರಬೇತಿ ನೀಡಲಿದ್ದಾರೆ. ಗಣತಿದಾರರು ಏಪ್ರಿಲ್ 1 ರೊಳಗೆ ತರಬೇತಿ ಮುಗಿಸಿ, ???ಪ್ ಮೂಲಕ ಗಣತಿ ಮಾಡಲು ಸನ್ನದ್ಧರಾಗಲಿದ್ದಾರೆ ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ.ಕಂಬಾಳಿಮಠ, ವಾರ್ತಾಧಿಕಾರಿ ವಸಂತ ಮಡ್ಲೂರ, ಜನಗಣತಿ ಜಿಲ್ಲಾ ನೋಡಲ್ ಅಧಿಕಾರಿ ರಂಜಿತ್ ಜಾಲಾ ಹಾಜರಿದ್ದರು.

# ಕೌಜಲಗಿ–ಮೂಡಲಗಿ–ಮಿರಜ ಹೊಸ ಬಸ್ ಸಂಚಾರಕ್ಕೆ ಚಾಲನೆ



ಮೂಡಲಗಿ : ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕೋಡಿ ವಿಭಾಗದ ಹಿರಿಯ ನಿಯಂತ್ರಣ ಅಧಿಕಾರಿ ಎಂ ಆರ್ ಮುಂಜಿಯವರ ಆದೇಶದ ಮೇರೆಗೆ , ಗೋಕಾಕ ಸಾರಿಗೆ ಘಟಕದ ವ್ಯವಸ್ಥಾಪಕ ಸುನಿಲ ಹೊನವಾಡ ಅವರು ಕೌಜಲಗಿ– ಮಿರಜ್ ಹೊಸ ಬಸ್ ಸಂಚಾರ ಬುಧವಾರದಿಂದ ಆರಂಭಿಸಿದ್ದಾರೆ.

ನೂತನವಾಗಿ ಬಸ್ ಸಂಚಾರಕ್ಕೆ ಕೌಜಲಗಿ ಹಾಗೂ ಕುಲಗೋಡ ಗ್ರಾಮಗಳಲ್ಲಿ ವಿಜೃಂಭಣೆಯ ಪೂಜೆ ಪುನಸ್ಕಾರ ನಡೆಸುವುದರ ಮೂಲಕ ಕಬ್ಬು ಮಾವು ಹೂಮಾಲೆಗಳಿಂದ ಅಲಂಕರಿಸಿ ಉಭಯ ಗ್ರಾಮಸ್ಥರು ಪ್ರತ್ಯೇಕವಾಗಿ ಮತ್ತೊಮ್ಮೆ ಹೊಸ ಬಸ್ ಸಂಚಾರಕ್ಕೆ ಚಾಲನೆ ನೀಡಿದರು.

ಕೌಜಲಗಿಯಲ್ಲಿ ನಡೆದ ಕೌಜಲಗಿ ಮಿರಾಜ್ ಹೊಸ ಬಸ್ ಸಂಚಾರಕ್ಕೆ ಮುಖಂಡರಾದ ಶಿವಾನಂದ ಲೋಕಣ್ಣವರ, ರವೀಂದ್ರ ಪರುಶೆಟ್ಟಿ ಮಿರಜ್ ನಗರದವರಿಗೆ ಸಾರಿಗೆ ಟಿಕೆಟ್ ಪಡೆಯುವುದರ ಮೂಲಕ ಚಾಲನೆ ನೀಡಿದರು. ಕೌಜಲಗಿ ಪ್ರಭಾರಿ ಸಾರಿಗೆ ನಿಯಂತ್ರಕ ಎ ಬಿ ಜಮಾದಾರ ಹಾಗೂ ಸಾರಿಗೆ ನಿರ್ವಾಹಕ – ಚಾಲಕರಿಗೆ ಹುಮಾಲೆ ಸಮರ್ಪಿಸುವುದರ ಮೂಲಕ ಶುಭ ಕೋರಿದರು. ಈ ಸಂದರ್ಭದಲ್ಲಿ ಮಹಾಂತಪ್ಪ ಶಿವನಮಾರಿ, ಅಶೋಕ ಶಿವಾಪುರ, ಭೀಮಶಿ ಉದ್ದಪ್ಪನವರ ಸೇರಿದಂತೆ ಪ್ರಮುಖರು, ಯುವಕರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಇದ್ದರು.

ಕುಲಗೋಡ ಗ್ರಾಮದ ಸಾರಿಗೆ ನಿಲ್ದಾಣದಲ್ಲಿ ನಡೆದ ಹೊಸ ಬಸ್ ಸಂಚಾರ ಚಾಲನೆಗೆ ಪೂಜೆ ಸಲ್ಲಿಸುವುದರ ಮೂಲಕ ಹೂಗಳಿಂದ ಮತ್ತಷ್ಟು ಅಲಂಕಾರ ಗೊಳಿಸಿ ಸಿಹಿ ಹಂಚುವುದರ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕುಲಗೋಡ ಸಾರಿಗೆ ನಿಯಂತ್ರಕ ಎ ಬಿ ಜಮಾದಾರ, ಗ್ರಾಮದ ಮುಖಂಡರಾದ ಸುಭಾಷ್ ವಂಟಗೋಡಿ, ಬಸನಗೌಡ ಪಾಟೀಲ, ತಮ್ಮಣ್ಣ ದೇವರ, ಸದಾಶಿವ ಬಡಕಲ್, ಈರಪ್ಪ ಯಡಹಳ್ಳಿ, ರಂಗಪ್ಪ ಕೊಪ್ಪದ ಮುಂತಾದವರಿದ್ದರು.

ಚಿಕ್ಕೋಡಿ ವಿಭಾಗದ ಗೋಕಾಕ ಘಟಕದ ವತಿಯಿಂದ ಜನರ ಬಹುದಿನದ ಬೇಡಿಕೆ ಮತ್ತು ಅನುಕೂಲಕ್ಕಾಗಿ ಕೌಜಲಗಿ ಯಿಂದ ಮಿರಜ ವರೆಗಿನ ಹೊಸ ಬಸ್ ಸಂಚಾರವು ಕೌಜಲಗಿಯಲ್ಲಿ ಮುಂಜಾನೆ 8.45 ಗಂಟೆಗೆ ಹೊರಟು ಕುಲಗೋಡ, ಮೂಡಲಗಿ, ಹಾರೂಗೇರಿ ಕ್ರಾಸ್, ಕುಡಚಿ, ಕಾಗವಾಡ ಮಾರ್ಗವಾಗಿ ಮಿರಜ ನಗರವನ್ನು ಮುಂಜಾನೆ 11:30 ಗಂಟೆಗೆ ತಲುಪಲಿದೆ.

ಮರಳಿ ಅದೇ ಬಸ್ಸು ಮಿರಜ ನಗರವನ್ನು ಬೆಳಿಗ್ಗೆ 11.45 ಗಂಟೆಗೆ ಬಿಡಲಿದ್ದು, ಕಾಗವಾಡ, ಕುಡಚಿ, ಹಾರೂಗೇರಿ ಕ್ರಾಸ್, ಮೂಡಲಗಿ, ಕುಲಗೋಡ ಮಾರ್ಗದ ಮೂಲಕ ಕೌಜಲಗಿ ಪಟ್ಟಣವನ್ನು ಮಧ್ಯಾಹ್ನ 2:30 ಗಂಟೆಗೆ ತಲುಪಲಿದ್ದು, ಈ ಮಾರ್ಗದ ಮೂಲಕ ಬೇರೆ ಬೇರೆ ಊರುಗಳಿಗೆ ಪ್ರಯಾಣಿಸುವ ಪ್ರಯಾಣಿಕರು ಈ ಬಸ್ಸಿನ ಅನುಕೂಲತೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕುಲಗೋಡ ಸಾರಿಗೆ ನಿಯಂತ್ರಕ ಎ ಬಿ ಜಮಾದಾರ ಕೋರಿದರು.

# ಏ.14 ರಂದು ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆಗೆ ನಿರ್ಧಾರ



ಅಥಣಿ: ಏಪ್ರಿಲ್ 14 ರಂದು ತಾಲೂಕಾ ಆಡಳಿತದಿಂದ ಆಚರಿಸುವ ಡಾ.ಬಿ.ಆರ್ ಅಂಬೇಡ್ಕರ್ ಅವರ ಜಯಂತಿಯ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ತಹಶೀಲ್ದಾರ್ ಸಿದರಾಯ ಬೋಸಗಿ ಹೇಳಿದರು ಅವರು ತಾಲೂಕಾ ಪಂಚಾಯತ ಸಭಾ ಭವನದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ಡಾ. ಬಿ, ಆರ್, ಅಂಬೇಡ್ಕರ್ ರವರ ಜನ್ಮದಿನಾಚರಣೆಯನ್ನು ತಾಲ್ಲೂಕಿನಾದ್ಯಂತ ಅತ್ಯಂತ ಸಂಭ್ರಮ ಹಾಗೂ ಶಿಸ್ತುಬದ್ಧವಾಗಿ ಬಾಬಾ ಸಾಹೇಬರ ವಿಚಾರಧಾರೆಗಳು ಸರ್ವರಿಗೂ ದಾರಿದೀಪವಾಗಿವೆ ಏಪ್ರಿಲ್ 14ರಂದು ನಡೆಯುಲಿರುವ ಜಯಂತಿಯನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ ಅವರ ತತ್ವಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಅರ್ಥಪೂರ್ಣವಾಗಿ ಆಚರಿಸಿ ಮೆರವಣಿಗೆ ಮತ್ತು ಸಭಾ ಕಾರ್ಯಕ್ರಮಗಳು ಎಲ್ಲಾ ಇಲಾಖೆಗಳ ಸಮನ್ವಯದಿಂದ ಕೆಲಸ ಮಾಡಬೇಕು ಹಾಗೂ ಎಲ್ಲ ಇಲಾಖೆ ಅಧಿಕಾರಿಗಳಿಗೆ ಸೂಚಿಸಿರುವ ಹಾಗೆ ತಮ್ಮ ತಮ್ಮ ಕೆಲಸಗಳನ್ನು ತಾವು ಶ್ರದ್ದೆಯಿಂದ ನೆರವೇರಿಸಬೇಕು

ಇನ್ನೂ ಅನೇಕ ದಲಿತ ಮುಖಂಡರು ನೀಡಿರುವ ಸಲಹೆಯಂತೆ ಕಾರ್ಯಕ್ರಮ ವಿಶೇಷ ಉಪನ್ಯಾಸ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಗುವುದು ಹಾಗೂ ಎಲ್ಲರ ಅಭಿಪ್ರಾಯದಂತೆ ಕಾರ್ಯಕ್ರಮ ನಡೆಸಲಾಗುವುದು ಅಲ್ಲದೆ ತಾಲೂಕಿನಾದ್ಯಂತ ಎಲ್ಲಾ ಕಚೇರಿಗಳಲ್ಲಿ,ಗ್ರಾಮ ಪಂಚಾಯತ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಣೆ ಮಾಡಬೇಕು ಹಾಗೂ ಕಾರ್ಯಕ್ರಮದಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಬೇಕೆಂದು ಎಚ್ಚರಿಕೆ ನೀಡಿದರು

ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪರಶುರಾಮ ಪತ್ತಾರ ಅವರು ಡಾ. ಬಿ ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಕುರಿತು ಆಯಾ ಇಲಾಖೆಗಳಿಗೆ ಜವಾಬ್ದಾರಿ ವಹಿಸಿದರು.

ಈ ವೇಳೆ ತಾ.ಪಂ ಅಧಿಕಾರಿ ಶಿವಾನಂದ ಕಲ್ಲಾಪೂರ, ತಾಲೂಕಾ ಆರೋಗ್ಯಾಧಿಕಾರಿ ಬಸಗೌಡಾ ಕಾಗೆ, ಪುರಸಭೆ ಮುಖ್ಯಾಧಿಕಾರಿ ಅಶೋಕ ಗುಡಿಮನಿ, ಪಿಎಸ್ ಆಯ್ ಮಲ್ಲಿಕಾರ್ಜುನ ತಳವಾರ, ಪುರಸಭೆ ಉಪಾಧ್ಯಕ್ಷ ಭುನೇಶ್ವರಿ ಯಕ್ಕಂಚಿ, ಸದಸ್ಯರಾದ ಮಲ್ಲಿಕಾರ್ಜುನ ಬುಟಾಳಿ, ಕಲ್ಲೇಶ ಮಡ್ಡಿ, ದಲಿತ ಮುಖಂಡರಾದ ಗೌತಮ ಪರಾಂಜಪೆ, ಮಹಾಂತೇಶ ಬಾಡಗಿ,ಶಶಿಕಾಂತ ಬಾಡಗಿ,ಶಶಿ ಸಾಳವೆ,ಮಿತೇಶ ಪಟ್ಟಣ, ರಾಮ ಮರೇಳರ, ಶಿಕಾಂತ ಆಲಗೂರ,ಸುಕುಮಾರ ಕಾಂಬಳೆ, ಸೇರಿದಂತೆ ಹಲವಾರು ದಲಿತ ಮುಖಂಡರು ಭಾಗಿಯಾಗಿದ್ದರು.



ನಗರದ ಅರವಿಂದ ನಗರದ ಶ್ರೀ ಹುಲಿಗೆಮ್ಮಾದೇವಿ ದೇವಸ್ಥಾನದಲ್ಲಿ ಮಾತೆ ಶ್ರೀ ಹುಲಿಗೆಮ್ಮಾದೇವಿಯವರ ಜನ್ಮದಿನದ ಪ್ರಯುಕ್ತ ತೊಟ್ಟಿಲೋತ್ಸವ, ವಿಶ್ವ ಮಹಿಳಾ ದಿನಾಚರಣೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು. ಮಹಿಳಾ ದಿನಾಚಾರಣೆ ನಿಮಿತ್ತ 80 ವರ್ಷ ಮೇಲ್ಪಟ್ಟ ಹಿರಿಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾತೋಶ್ರೀ ಡಾ. ಹುಲಿಗೆಮ್ಮಾ ಪೋಸಾ, ಪ್ರಕಾಶ ಅರಗಂಜಿ, ಶ್ರೀಧರ ಕನಮಕಲ್, ವಿರುಪಾಕ್ಷ ಚಲವಾದಿ, ಬಸವರಾಜ ಚಂದರಗಿ, ಮುದ್ದಪ್ಪ ಕಲ್ಹಾರಿ, ಮಹಾಂತೇಶ ನೆಗಳೂರ, ನಾಗೇಶ ಡೊಂಗರೆ, ಪರಶುರಾಮ ಸುಳ್ಳದ, ಅಜಯ ಶೇರಖಾನೆ, ಕೃಷ್ಣ ಗಜಕೋಶ, ಶಿವರಾಜ ಪುಸಲೂರ, ದೇವಸ್ಥಾನದ ಪ್ರಧಾನ ಅರ್ಚಕರಾದ ರವಿಕುಮಾರ ಮಡ್ಡಿ, ಶ್ರೀಮತಿ ಭಾಗ್ಯಶ್ರೀ ಕಾಶಿನ ಉಪಸ್ಥಿತರಿದ್ದರು.




ಗೋಕಾಕ: ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗವಕಾಶಗಳಿದ್ದು ಕಠಿಣ ಪರಿಶ್ರಮದಿಂದ ಪ್ರತಿಭಾನ್ವಿತರಾಗಿರೆಂದು ನಗರಾಭಿವೃದ್ಧಿ ಯೋಜನೆ ಸಹಾಯಕ ನಿರ್ದೇಶಕ ಶ್ರೀಶೈಲ ಅವಟಿ ಹೇಳಿದರು.

ಅವರು, ಬುಧವಾರದಂದು ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಪಾಲಿಟೇಕ್ನೀಕನ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತ ವಿದ್ಯಾರ್ಥಿಗಳು ತಮ್ಮಲ್ಲಿಯ ಕೌಶಲ್ಯಗಳನ್ನು ವೃದ್ಧಿಸಿಕೊಂಡು ಸಾಧಕರಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ, ಪ್ರಾಚಾರ್ಯ ಎಚ್ ಎಸ್ ಅಡಿಬಟ್ಟಿ, ಉಪನ್ಯಾಸಕರಾದ ಪಿ ಡಿ ಪಾಂಚಾಳ, ಆರ್ ಎಸ್ ಕರಿಗಾರ, ವಿದ್ಯಾರ್ಥಿ ಪ್ರತಿನಿಧಿಗಳಾದ ಸುಫೀಯಾನ ಪೀರಜಾದೆ, ತನುಜಾ ಗುಡದಪ್ಪಗೋಳ ಇದ್ದರು.

# ಮಾ. 31 ರಂದು ವಿಶ್ವ ಮಹಿಳಾ ದಿನಾಚರಣೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ



ಅಥಣಿ: ಭರವಸೆ ಬೆಳಕು ಫೌಂಡೇಶನ್ ವತಿಯಿಂದ ದ್ವಿತೀಯ ವರ್ಷದ ವಾರ್ಷಿಕೋತ್ಸವ, ವಿಶ್ವ ಮಹಿಳಾ ದಿನಾಚರಣೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಮಾರ್ಚ್ 31ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಗಚ್ಚಿನ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಭರವಸೆ ಬೆಳಕು ಫೌಂಡೇಶನ್ ಅಧ್ಯಕ್ಷೆ ರೂಪಾ ಕಾಂಬಳೆ ಹೇಲಿದರು

ಅವರು ಪಟ್ಟಣದ ನಿರೀಕ್ಷಣಾ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮಿ ಚೌಧರಿ ಅವರು ನೆರವೇರಿಸಲಿದ್ದಾರೆ. ಶಾಸಕ ಲಕ್ಷ್ಮಣ ಸವದಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ತಾಲೂಕಿನ ಹಾಗೂ ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನಂತರ ಕರುನಾಡ ಕಾರ್ಮಿಕ ವೇದಿಕೆ ಜಿಲ್ಲಾ ಅಧ್ಯಕ್ಷೆ ರಾಣಿ ಬಡಿಗೇರ್ ಮಾತನಾಡಿ, "ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಮೊದಲ ಬಾರಿಗೆ ಅಥಣಿಗೆ ಆಗಮಿಸುತ್ತಿದ್ದಾರೆ. ಮಹಿಳೆಯರು ಬೆಂಗಳೂರಿಗೆ ಹೋಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದು ಕಷ್ಟಸಾಧ್ಯ. ಹೀಗಾಗಿ, ಅಥಣಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಈ ಕಾರ್ಯಕ್ರಮಕ್ಕೆ ಆಗಮಿಸಿ, ತಮ್ಮ ಕುಂದುಕೊರತೆಗಳನ್ನು ನೇರವಾಗಿ ಅವರ ಗಮನಕ್ಕೆ ತಂದು ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಇದೊಂದು ಉತ್ತಮ ಅವಕಾಶ" ಎಂದರು.

ಈ ವೇಳೆ ಪೌಂಡೇಶನ್ ಕಾರ್ಯದರ್ಶಿ ಕಾದಂಬರಿ ಅಕ್ಕೋಳ, ಸವಿತಾ ಕಾಂಬಳೆ, ಗೀತಾ ಮಡ್ಡಿ, ವೈಶಾಲಿ ಮೇಲ್ಗಡೆ, ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ ಮುಸ್ಲಿಂ ಬಾಂಧವರ ಪವಿತ್ರ ರಂಜಾನ್ ( ಈದ್–ಉಲ್–ಫಿತರ್ ) ಹಬ್ಬದ ಶುಭ ಸಂದರ್ಭದಲ್ಲಿ ಟಿವಿ ವರದಿಗಾರ ಆಸಿಫ್ ಬಂಕಾಪುರ ಅವರನ್ನು ಮೂರುಸಾವಿರಮಠದ ವಿದ್ಯಾವರ್ಧಕ ಸಂಘದ ಸದಸ್ಯರು, ಗಣ್ಯರಾದ, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಾಜಿ ಅಧ್ಯಕ್ಷ ಸದಾನಂದ ಡಂಗನವರ ಅವರು ಪ್ರೀತಿ, ಆತ್ಮೀಯತೆಯಿಂದ ಹೃದಯಪೂರ್ವಕವಾಗಿ ಗೌರವಿಸಿದರು. ಅಭಿನಂದನೆಗಳನ್ನು ಸಲ್ಲಿಸಿ ಹಬ್ಬದ ಶುಭ ಕೋರಿದರು. ಹಿರಿಯರಾದ ಲಿಂಗರಾಜ ಇಂಗಳಹಳ್ಳಿ , ಎ ಬಿ ಪಾಟೀಲ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ವರದಿಗಾರರಾದ ಬಾಲು, ಸಲ್ಮಾನ್, ವಿಜಯಕುಮಾರ, ಅಜೀಜ್ ಲೋಕಪ್ಪಲಿ, ಮೊಹಮ್ಮದ್, ಖತೀಬ್, ನವೀನ್ ಕುದರಿ, ಗಿರೀಶ, ಮುಂತಾದ ಭಕ್ತರು ಇದ್ದರು.

# ಹುಕ್ಕೇರಿ ಪಟ್ಟಣದಲ್ಲಿ ಗೀತಗುಚ್ಚ ಕವನ ಸಂಕಲನ ಲೋಕಾರ್ಪಣೆ



ಹುಕ್ಕೇರಿ: ಪಟ್ಟಣದ ರವದಿ ಫಾರ್ಮರ್ಸ್ ನಲ್ಲಿ ಶ್ರೀಮತಿ ಗೀತಾ ಸುಭಾಷ್ ಬಸ್ತವಾಡ ಇವರ ಚೊಚ್ಚಲ ಗೀತಗುಚ್ಚ ಕವನ ಸಂಕಲನ ವೇದಿಕೆಯ ಗಣ್ಯರಿಂದಲೋಕಾರ್ಪಣೆಗೊಂಡಿತು. ನೆರೆದಿದ್ದ ನೂರಾರು ಜನ ಇದಕ್ಕೆ ಸಾಕ್ಷಿಯಾದರು ಬಸ್ತವಾಡ ದಂಪತಿಗಳು ತಮ್ಮ ರಜತ ವಿವಾಹೋತ್ಸವವನ್ನು ವಿಭಿನ್ನವಾಗಿ ಆಚರಿಸಿಕೊಳ್ಳುವ ವಿಚಾರಗಳೊಂದಿಗೆ ಗ್ರಂಥಾ ಲೋಕಣೆ ಸಾಂಕೇತಿಕವಾಗಿ 25 ಆದರ್ಶ ದಂಪತಿಗಳಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು ಹುಕ್ಕೇರಿ ಪಟ್ಟಣದಲ್ಲಿಯೇ ವಿನೂತನವಾದಂತ ಕಾರ್ಯಕ್ರಮ ಇದಾಗಿತ್ತು. ತಾವು ಬರೆದಂತ ಕವನಗಳಲ್ಲಿ 105 ನ್ನು ಆಯ್ಕೆ ಮಾಡಿಕೊಂಡು ಈ ಕವನ ಸಂಕಲನವನ್ನು ಲೋಕಾರ್ಪಣೆ ಗೊಳಿಸಿದ್ದಾರೆ.

ಈ ಕವನಗಳಲ್ಲಿ ಅಧ್ಯಾತ್ಮ, ಹಬ್ಬಗಳು, ಪ್ರಕೃತಿ ಪ್ರೇಮ, ಋಣಾನುಬಂಧ, ಕನ್ನಡ ನಾಡು ನುಡಿ ವೈಭವ, ವ್ಯಕ್ತಿ ವಿಶೇಷ, ಸಾಮಾಜಿಕ ಕಳಕಳಿ, ಪ್ರೀತಿ ಪ್ರೇಮ ಪ್ರಣಯ ಹೀಗೆ ಹಲವಾರು ಮಜಲುಗಳನ್ನು ಒಳಗೊಂಡಿದೆ. ಡಾಕ್ಟರ್ ರಾಜಶೇಖರ್ ಇಚ್ಚಂಗಿ ಸಂಶೋಧಕರು ಗ್ರಂಥ ಪರಿಚಯ ಮಾಡಿಕೊಂಡರು. ಶ್ರೀಮತಿ ರೇವತಿ ಮಠ ಡಿ ವಾಯ್ ಪಿ ಸಿ ಕವನ ಸಂಕಲದ ಒಳಾರ್ಥಗಳನ್ನು ಹೊರಹಾಕಿದರು ವೇದಿಕೆಯಲ್ಲಿದ್ದ ಗಣ್ಯರು ಕವನ ಸಂಕಲನದ ಪರಿಚಯುದೊಂದಿಗೆ ತಮ್ಮ ಅಭಿಪ್ರಾಯವನ್ನು ಮಂಡನೆ ಮಾಡಿದರು. ಈ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಪಾತ್ರವಾಗಿ ಹೊಸ ಇತಿಹಾಸದ ಸೃಷ್ಟಿಗೆ ಸಾಕ್ಷಿ ಆಯಿತು. ಶಿಕ್ಷಕರಲ್ಲಿ ಬರೆಯುವ ಹವ್ಯಾಸ ಬೆಳೆಸಿಕೊಳ್ಳಿ ಎಂದು ಶ್ರೀಮತಿ ಮಠದ ಕರೆಕೊಟ್ಟರು. ಶ್ರೀ ಪದ್ಮನ್ನರ್ ಸರ್ ಶಿಕ್ಷಕರಂದರೇ ಕ್ರಿಯಾಶೀಲರಾಗಿ ಇರಬೇಕೆಂದು ಅಭಿಪ್ರಾಯಪಟ್ಟರು. ಶ್ರೀಮಾವೀರ ನಿಲಜಿಯವರು ಕಾರ್ಯಕ್ರಮ ವಿಶಿಷ್ಟ ವಿನೂತನವಾಗಿದೆ ಎಂದು ಹೇಳಿದರು. 25 ಆದರ್ಶ ದಂಪತಿಗಳ ಗೌರವ ಸಮರ್ಪಣೆ ಯೊಂದಿಗೆ ಗೀತ ಗುಚ್ಚ ಕವನ ಸಂಕಲನ ಹುಕ್ಕೇರಿಯಲ್ಲಿ ಅನಾವರಣಗೊಂಡಿತು. ಪ್ರಾರ್ಥನೆಯನ್ನು ಎಂ ಎನ್ ತೇರದಾಳೆ ಹೇಳಿದರೆ ಸ್ವಾಗತ ಪರಭಾಷಣವನ್ನು, ಕುಮಾರ್ ಬಡಿಗೇರ್ ಸರ್ ಮಾಡಿದರು ಶ್ರೀ ದರ್ಬಾರೆ ಸರ್ ಕಾರ್ಯಕ್ರಮ ನಿರೂಪಣೆ ಮಾಡಿದರು ಕಾರ್ಯಕ್ರಮದ ವ್ಯವಸ್ಥೆಗಾಗಿ ಶ್ರೀ ಬಾಲಕೃಷ್ಣ ಕೋಳೆಕರ್ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಶ್ರೀ ಶಿವ ಬಸವ ಮಹಾಪ್ರಭುಗಳು, ಶ್ರೀ ವಿಜಯ್ ರವದಿ ಸಮಾಜ ಸೇವಾ ಸಂಸ್ಥೆ ರಾಜಶೇಖರ ಇಚ್ಚಂಗಿ, ಶ್ರೀ ಮಹಾವೀರ್ ನಿಲಜಗಿ ಅಧ್ಯಕ್ಷರು ಕೆಇಬಿ, ಶ್ರೀ ಬಿ ಬಿ ಚೌಗುಲ ಅಧ್ಯಕ್ಷರು ಅರಿಯಂತ ಬ್ಯಾಂಕ್ ಹುಲ್ಲೋಳಿ, ಶ್ರೀ ಅಶೋಕ್ ಪಾಟೀಲ್ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಶ್ರೀ ನಂಜುಂಡಿ ಕಸಪ್ಪ ಮಾಜಿ ಅಧ್ಯಕ್ಷರು, ಶ್ರೀಮತಿ ರೇವತಿ ಮಠದ, ಶ್ರೀ ಪದ್ಮನ್ನವರ್ ಸರ್ ಶ್ರೀ ಮಾದೇವ ಕುಂಬಾರ್ ಸರ್ ಶಾಂತ ಬಾಬುಬಸ್ತವಾಡ್ , ಸುರೇಖಾ ಅಶೋಕ್ ಶೇಠಿ ವೇದಿಕೆಯಲ್ಲಿದ್ದರು ನೆರೆದಿದ್ದ ಜನರೆಲ್ಲ ಕವನ ಸಂಕಲನ ಯಶಸ್ವಿ ಯಾಗಿ ಎಲ್ಲರ ಮನೆ ಮನ ಮುಟ್ಟಲೆಂದು ಶುಭ ಹಾರೈಸಿದರು.

# ಪ್ರವಾಸಿ ಮಾರ್ಗದರ್ಶಿಗಳಿಗೆ ಜಾಕೆಟ್ ಹಾಗೂ ಸ್ಪೋರ್ಟ್ಸ್ ಶೂ ವಿತರಣೆ



ಗದಗ: 2024-25 ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆಯಡಿ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ 08 ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಉತ್ತೇಜಿಸಿ, ಪ್ರಚಾರ ಮಾಡುವ ದೃಷ್ಟಿಯಿಂದ ಪರಿಶಿಷ್ಟ ಜಾತಿಗೆ ಸೇರಿದ 100 ಅಭ್ಯರ್ಥಿಗಳು ಮತ್ತು ಪರಿಶಿಷ್ಟ ಪಂಗಡದ 60 ಅಭ್ಯರ್ಥಿಗಳು, ಒಟ್ಟು 160 ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡಿ, ಸದರಿ ಅಭ್ಯರ್ಥಿಗಳಿಗೆ ಜಾಕೆಟ್ ಹಾಗೂ ಒಂದು ಜೊತೆ ಸ್ಪೋರ್ಟ್ಸ್ ಶೂ ಗಳನ್ನು ಒದಗಿಸುವಂತೆ ಕೇಂದ್ರ ಕಛೇರಿಯಿಂದ ಸೂಚಿಸಲಾಗಿತ್ತು.

ಅದರಂತೆ ಗುರುವಾರ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಗದಗ ಕಛೇರಿಯಲ್ಲಿ ಪ್ರವಾಸಿ ಮಾರ್ಗದರ್ಶಿಗಳಿಗೆ ಜಾಕೆಟ್ ಹಾಗೂ ಒಂದು ಜೊತೆ ಸ್ಪೋರ್ಟ್ಸ್ ಶೂ ವಿತರಿಸಲಾಯಿತು.

ಪ್ರವಾಸಿ ಮಾರ್ಗದರ್ಶಿ ಪ್ರವೀಣ ತೆಗ್ಗಿನಮನಿ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಈ ಯೋಜನೆ ಸಹಕಾರಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ ಕೊಟ್ರೇಶ್ವರ.ವಾಯ್.ವಿಭೂತಿ ಹಾಗೂ .ಬಸವರಾಜ ಕಡೆಮನಿ, ಪ್ರವಾಸಿ ಮಾರ್ಗದರ್ಶಿಗಳು, ಕಚೇರಿ ಸಿಬ್ಬಂದಿ ಹಾಜರಿದ್ದರು.

# ನಾಳೆಯಿಂದ ಬಸವ ಧರ್ಮ ಸಂಸ್ಕಾರ ಶಿಬಿರ

ಗೋಕಾಕ: ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ಮಹಿಳಾ ಘಟಕ ಗೋಕಾಕ ಇವರ ಆಶ್ರಯದಲ್ಲಿ ಅಕ್ಕಮಹಾದೇವಿ ಜಯಂತಿ ನಿಮಿತ್ಯ ನಗರದ ಬಸವ ಮಂದಿರದಲ್ಲಿ ದಿ.29, 30, 31ರಂದು ಬಸವ ಧರ್ಮ ಸಂಸ್ಕಾರ ಶಿಭಿರವನ್ನು ಬೆಂಗಳೂರಿನ ಬಸವ ಧರ್ಮ ಪೀಠದ ವಿಜಯಾಂಬಿಕಾ ಮಾತಾಜಿ ನೇತ್ರತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ದಿ.29ರಂದು ಮುಂಜಾನೆ 6.30ಕ್ಕೆ ಬಸವ ಧರ್ಮ ಸಂಸ್ಕಾರ ಶಿಭಿರದ ಉದ್ಘಾಟನೆಯನ್ನು ಶ್ರೀಮತಿ ರತ್ನಾ ಉದೋಶಿಯವರು ನೆರವೇರಿಸುವರು. ನೇತ್ರತ್ವವನ್ನು ವಿಜಯಾಂಬಿಕಾ ಮಾತಾಜಿ, ಅಧ್ಯಕ್ಷತೆಯನ್ನು ಗೋಕಾಕ ಬಣಜಿಗ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮಹಾದೇವಿ ಉಪ್ಪಿನ ವಹಿಸುವರು. ದಿ.29ರಿಂದ 31ರ ವರೆಗೆ ಪ್ರತಿ ದಿ. ಬೆಳಿಗ್ಗೆ 6.30ಕ್ಕೆ ಸಹಜ ಶಿವಯೋಗ ಮತ್ತು ಇಷ್ಟಲಿಂಗ ಪೂಜೆ, ಸಂಜೆ 6ರಿಂದ 7ರವರೆಗೆ ವಿಜಯಾಂಬಿಕಾ ಮಾತಾಜಿ ಅವರಿಂದ ಪ್ರವಚನ ಕಾರ್ಯಕ್ರಮ ಜರುಗುವದು.

ದಿ.31ರಂದು ಮುಂಜಾನೆ 6.30ಕ್ಕೆ ಬಸವ ಧರ್ಮ ಸಂಸ್ಕಾರ ಶಿಭಿರದ ಸಮಾರೋಪ ಸಮಾರಂಭ ಜರುಗುವದು. ದಿವ್ಯ ಸಾನಿಧ್ಯವನ್ನು ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸಲಿದ್ದು, ಅಧ್ಯಕ್ಷತೆಯನ್ನು ಶ್ರೀಮತಿ ಮಹಾದೇವಿ ಉಪ್ಪಿನ ವಹಿಸವರು. ವಿಜಯಾಂಬಿಕಾ ಮಾತಾಜಿ ಉಪಸ್ಥಿತರಿರುವರು. ಸಂಜೆ 5ಗಂಟೆಗೆ ಶಿವಶರಣೆ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಶ್ರೀಮತಿ ಅಮೃತಮ್ಮ ಮಹಾದೇವಪ್ಪಣ್ಣ ಮುನವಳ್ಳಿ ಉದ್ಘಾಟಿಸಲಿದ್ದು, ಸುವರ್ಣಾತಾಯಿ ಹೊಸಮಠ ಉಪನ್ಯಾಸ ನೀಡಲಿದ್ದಾರೆ. ವಿಜಯಾಂಬಿಕಾ ಮಾತಾಜಿ ಹಾಗೂ ಶ್ರೀಮತಿ ಮಹಾದೇವಿ ಉಪ್ಪಿನ ಉಪಸ್ಥಿತರಿರುವರೆಂದು ಕಾರ್ಯದರ್ಶಿ ಹರ್ಷಿತಾ ಸವಣೂರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.



ಈ ಸಂದರ್ಭದಲ್ಲಿ ಅಧ್ಯಕ್ಷೆ ಶ್ರೀಮತಿ ಮಹಾದೇವಿ ಉಪ್ಪಿನ, ದೀಪಾ ಬೆಲ್ಲದ, ಶೈಲಾ ಬಿದರಿ ಇದ್ದರು.

# ಸಾರ್ವಜನಿಕರ ಗಮನಕ್ಕೆ

ಗದಗ: ನರೇಗಲ್ಲ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿಯ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ. ಸಾರ್ವಜನಿಕರು ನರೇಗಲ್ಲ ಪಟ್ಟಣ ಪಂಚಾಯತಿಗೆ ಸಂದಾಯ ಮಾಡಬೇಕಾದ ಆಸ್ತಿ ತೆರಿಗೆಗೆ ದರಗಳನ್ನು 2026-2027 ನೇ ಸಾಲಿಗೆ ಪರಿಷ್ಕರಿಸುವ ಕುರಿತು ಕರ್ನಾಟಕ ಸ್ಟಾಂಪುಗಳ ಅಧಿನಿಯಮ 1957 ರ ನಿಯಮ 45ಬಿ ರಡಿ ಪ್ರಕಟಿತ ಸ್ಥಿರಾಸ್ತಿಗಳ ಮಾರುಕಟ್ಟೆ ಮಾರ್ಗಸೂಚಿ ದರಗಳ ಆಧಾರದ ಮೇರೆಗೆ ಕನಿಷ್ಠ 3% ರಿಂದ ಗರಿಷ್ಠ 5% ರವರೆಗೆ ತೆರಿಗೆ ದರಗಳನ್ನು ಪರಿಷ್ಕರಣೆ ಮಾಡಲು ಆದೇಶಿಸಿದಂತೆ ಈ ಕೆಳಗೆ ವಿವರಿಸಿದಂತೆ ತೆರಿಗೆ ದರಗಳನ್ನು ಪರಿಷ್ಕರಿಸಲಾಗಿರುತ್ತದೆ.

ವಾಸದ ಉದ್ದೇಶದ ಕಟ್ಟಡಗಳಿಗೆ ಶೇ 3.5 % , ವಾಣಿಜ್ಯ/ ಕೈಗಾರಿಕೆ / ವಾಸೇತರ ಸ್ವತ್ತುಗಳಿಗೆ ಶೇ 4.00 % , ನಿವೇಶನಗಳಿಗೆ ಶೇ 5.00 % ರಷ್ಟು ತೆರಿಗೆ ದರ ಪರಿಷ್ಕರಿಸಲಾಗಿದೆ.

ಸರ್ಕಾರದ ಅಧಿಸೂಚನೆ ಮತ್ತು ಆದೇಶಗಳ ಮೇರೆಗೆ ಹಾಗೂ ಪಟ್ಟಣ ಪಂಚಾಯತಿ ಆಡಳಿತಾಧಿಕಾರಿಗಳ ನಡಾವಳಿ ಠರಾವು ನಂ.20 ದಿನಾಂಕ:-09/03/2026 ಮೇರೆಗೆ ಆಸ್ತಿ ತೆರಿಗೆ ದರಗಳನ್ನು 2026-2027 ನೇ ಸಾಲಿಗೆ ದಿನಾಂಕ:-01/04/2026 ರಿಂದ ಜಾರಿಗೆ ಬಂದಿರುವಂತೆ ಪರಿಷ್ಕರಿಸಲಾಗಿರುತ್ತದೆ. ಇದರಿಂದಾಗಿ 2025-2026 ನೇ ಸಾಲಿನ ಆಸ್ತಿ ತೆರಿಗೆಗೆ ಸರಾಸರಿ ಶೇ.4.16% ರಷ್ಟು ತೆರಿಗೆ ಹೆಚ್ಚಿಸಲಾಗಿರುತ್ತದೆ ಎಂದು ನರೇಗಲ್ ಪಟ್ಟಣ ಪಂಚಾಯತ್ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

## ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಾರ್ಚ 25 ರಂದು ಜರುಗಿದ ದಿನದರ್ಶಿಕೆ ಹಾಗೂ ದಿನಚರಿ ವಿತರಣೆ; ವಿಶೇಷ ಸಾಧಕರಿಗೆ ಸನ್ಮಾನ ಕಾರ್ಯಕ್ರಮ

ಧಾರವಾಡ: ಕೌಶಲ್ಯಭಿವೃದ್ಧಿ, ಉಧ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಧಾರವಾಡ ಇವರುಗಳ ಸಂಯುಕ್ತಾಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಜಿಲ್ಲಾಮಟ್ಟದ ವಸ್ತುಪ್ರದರ್ಶನ ಮತ್ತು ಸಂಜೀವಿನಿ ಯೋಜನೆಯ ದಿನದರ್ಶಿಕೆ (ಕ್ಯಾಲೆಂಡರ್) ಮತ್ತು ಎನ್.ಆರ್.ಎಲ್.ಎಂ. ದಿನಚರಿ ವಿತರಣಾ ಕಾರ್ಯಕ್ರಮವನ್ನು ಮಾರ್ಚ 25, 2026 ರಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಹುಬ್ಬಳ್ಳಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಗರೀಮಾ ಪನ್ವಾರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಅಂತರಾಷ್ಟ್ರೀಯ ಮಹಿಳಾ ದಿನಚಾರಣೆಯು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ದಿನವಾಗಿದೆ ಎಂದು ಹೇಳಿದರು.

ಲಿಂಗ ಸಮಾನತೆ, ಮಹಿಳಾ ಸಬಲೀಕರಣದ, ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡಿ, ಮಹಿಳೆಯರು ಶೋಷಣೆಯ ವಿರುದ್ಧ ಧ್ವನಿ ಎತ್ತಬೇಕು. ಕೇವಲ ಮನೆಗೆ ಸೀಮಿತವಾಗಬಾರದು. ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಷ್ಟೇ ಸಮರ್ಥಳಾಗಿ ಸಾಧನೆ ಮಾಡುವಂತಾಗಬೇಕು. ಸಮಾಜದಲ್ಲಿ ಲಿಂಗ ಅಸಮಾನತೆ, ತಾರತಮ್ಯ, ಹಿಂಸೆ, ಭ್ರೂಣ ಹತ್ಯೆ ಇವುಗಳ ವಿರುದ್ಧ ಧ್ವನಿ ಎತ್ತಬೇಕು ಮತ್ತು ತಮ್ಮ ಸುರಕ್ಷತೆ ಸಮಾನ ಅವಕಾಶ ಕಲ್ಪಿಸುವ ವಾತಾವರಣವನ್ನು ನಿರ್ಮಾಣ ಮಾಡಿ ಸಮಾಜದಲ್ಲಿ ಗೌರವಯುತವಾಗಿ ಬದುಕನ್ನು ನಡೆಸಬೇಕೆಂದು ಅವರು ಹೇಳಿದರು.

ಜಿಲ್ಲಾ ಪಂಚಾಯುತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿ, ಮಹಿಳೆಯರು ಯಾವುದೇ ಕಾರ್ಯಗಳನ್ನು ಕೈಗೊಂಡಾಗ ನಿರ್ಣಯುವನ್ನು ತಾವೇ ಖುದ್ದಾಗಿ ತೆಗೆದುಕೊಳ್ಳುವಂತಾಗಬೇಕು. ತಮ್ಮ ನಿರ್ಣಯುವನ್ನು ಬೇರೆಯುವರು ತೆಗೆದುಕೊಳ್ಳುವಂತೆ ಅವಲಂಬಿತ ಆಗಬಾರದು ಎಂದು ಅವರು ಹೇಳಿದರು.

ನಮ್ಮ ಜಿಲ್ಲೆಯಲ್ಲಿ ಸ್ವ-ಸಹಾಯು ಸಂಘಗಳು ಮತ್ತು ಒಕ್ಕೂಟಗಳು ಬಹಳಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಂಡು ಆಸಕ್ತಿಯಿಂದ ನಿರ್ವಹಿಸಬೇಕು. ಮಹಿಳೆಯರಿಗೆ ಸಮಾನ ಹಕ್ಕುಗಳು ಇದ್ದು, ನಿರ್ಣಯು ತೆಗೆದುಕೊಳ್ಳಲು ಗಂಡು ಮತ್ತು ಹೆಣ್ಣಿನ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ತಮ್ಮ ಹಕ್ಕುಗಳ ಬಗ್ಗೆ ಸಾಕಷ್ಟು ಅರಿವು ಇರಬೇಕು. ಮಹಿಳೆಯುರು ಕುಟುಂಬ ಮತ್ತು ಕುಟುಂಬದ ಸದಸ್ಯರ ಎಲ್ಲ ಆಗು ಹೋಗುಗಳ ಬಗ್ಗೆ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಸಹನೆ ಮತ್ತು ತಾಳ್ಮೆಯಿಂದ ಹೋಗಬೇಕಾದ ಜವಾಬ್ದಾರಿ ಇರುತ್ತದೆ. ಸಮಾನ ಅವಕಾಶದೊಂದಿಗೆ ಎಲ್ಲ ರಂಗದಲ್ಲಿಯೂ ಅಭಿವೃದ್ಧಿ ಹೊಂದಬೇಕೆಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ವರ್ಷದ ಪ್ರಶಸ್ತಿ ಪಡೆದ ಸ್ವ-ಸಹಾಯ ಸಂಘ ಮತ್ತು ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಗಳಿಗೆ ಅಭಿನಂದಿಸಿದರು. ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯು ಕಾರ್ಯಕ್ರಮದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಗಳಿಗೆ ಹಾಗೂ ಸ್ವ-ಸಹಾಯು ಸಂಘಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪ್ರಮಾಣಪತ್ರವನ್ನು ವಿತರಿಸಲಾಯಿತು.

ಅತ್ಯುತ್ತಮ ಸಾಧನೆ ಮಾಡಿದ ಗ್ರಾಮ ಪಂಚಾಯತ ಒಕ್ಕೂಗಳು: ಅತ್ಯುತ್ತಮ ಸಾಧನೆ ಮಾಡಿದ 21 ಗ್ರಾಮ ಪಂಚಾಯತ ಒಕ್ಕೂಗಳ ಪೈಕಿ ಪ್ರಥಮ ಬಹುಮಾನ ಧಾರವಾಡ ತಾಲ್ಲೂಕಿನ ಗರಗ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಕ್ಕೆ ರೂ.75,000 ಗಳನ್ನು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

ದ್ವಿತೀಯು ಬಹುಮಾನ ಪಡೆದ ಅಳ್ನಾವರ ತಾಲ್ಲೂಕಿನ ಬೆಣಚಿ ಗ್ರಾಮ ಪಂಚಾಯುತ ಮಟ್ಟದ ಒಕ್ಕೂಟಕ್ಕೆ ರೂ.50,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು. ತೃತೀಯ ಬಹುಮಾನ ಪಡೆದ ಅಣ್ಣಿಗೇರಿ ತಾಲ್ಲೂಕಿನ ಭದ್ರಾಪೂರ ಗ್ರಾಮ ಪಂಚಾಯುತ ಮಟ್ಟದ ಒಕ್ಕೂಟಕ್ಕೆ ರೂ.25,000 ಗಳನ್ನು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

ಅತ್ಯುತ್ತಮ ಸಾಧನೆ ಮಾಡಿದ ಸ್ವ-ಸಹಾಯ ಸಂಘಗಳು: ಅತ್ಯುತ್ತಮ ಸಾಧನೆ ಮಾಡಿದ 21 ಸ್ವ-ಸಹಾಯ ಸಂಘಗಳು ಪೈಕಿ ಪ್ರಥಮ ಬಹುಮಾನ ಮಳಲಿ ಗ್ರಾಮ ಪಂಚಾಯತಿಯ ಬೀಬಿ ಫಾತೀಮ ಸ್ವ-ಸಹಾಯ ಸಂಘಕ್ಕೆ ರೂ.1,00,000 ಗಳನ್ನು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

ದ್ವಿತೀಯು ಬಹುಮಾನ ಪಡೆದ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯತಿಯ ಶ್ರೀ ವಿಜಯಲಕ್ಷ್ಮೀ ಸ್ತ್ರೀ ಶಕ್ತಿ ಸಂಘಕ್ಕೆ ರೂ.75,000 ಗಳನ್ನು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು. ತೃತೀಯು ಬಹುಮಾನ ಪಡೆದ ನವಲಗುಂದ ತಾಲ್ಲೂಕಿನ ಗುಡಿಸಾಗರ ಗ್ರಾಮ ಪಂಚಾಯತಿಯ ಸುಮತಿ ಸ್ವ-ಸಹಾಯ ಸಂಘಕ್ಕೆ ರೂ.50,000 ಗಳನ್ನು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದ ಎಮ್‌ಬಿಕೆ, ಎಲ್‌ಸಿಆರ್‌ಪಿ, ಕೆಎಸ್, ಪಿಎಸ್, ಬಿಸಿ ಸಖಿ ಸ್ವಚ್ಛ ವಾಹಿನಿ ಚಾಲಕರಿಗೆ ಹಾಗೂ ಸಹಾಯಕಿಯರಿಗೆ ಪ್ರಶಸ್ತಿಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಜಿಲ್ಲಾ ಪಂಚಾಯುತ ಯೋಜನಾ ನಿರ್ದೇಶಕರು ಬಿ.ಎಸ್.ರಾಠೋಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಸಮಾಲೋಚಕಿ ಪದ್ಮಾವತಿ ನಾಗನಗೌಡರ ಸ್ವಾಗತಿಸಿದರು. ಗೀತಾ ಬಡಿಗೇರ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ವಿನೋದ ಕಂಠಿ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಮುಖ್ಯಯೋಜನಾಧಿಕಾರಿ ದೀಪಕ ಮಡಿವಾಳರ, ಮುಖ್ಯ ಲೆಕ್ಕಾಧಿಕಾರಿ ಲಲಿತಾ ಲಮಾಣಿ, ಹಾಗೂ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲ ಸಹಾಯಕ ನಿರ್ದೇಶಕರು ಮತ್ತು ಪಂಚಾಯುತ ಅಭಿವೃದ್ಧಿ ಅಧಿಕಾರಿಗಳು, ಸ್ವ-ಸಹಾಯ ಸಂಘದ ಮಹಿಳೆಯರು, ಒಕ್ಕೂಟದ ಮಹಿಳೆಯರು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯುತಿಯು ಸಿಬ್ಬಂದಿಗಳು ಭಾಗವಹಿಸಿದ್ದರು.

# ಬಳಬಟ್ಟಿ ಗ್ರಾಮ ಪಂಚಾಯತಿ ಚುನಾವಣೆ: ಶಾಂತಾ ದಡ್ಡಿ ಅಧ್ಯಕ್ಷರಾಗಿ, ದುರ್ಗವ್ವ ಮಾದರ ಉಪಾಧ್ಯಕ್ಷರಾಗಿ ಭರ್ಜರಿ ಆಯ್ಕೆ; ಪಟಾಕಿ ಸಿಡಿಸಿ ಸಂಭ್ರಮ



ಮುದ್ದೇಬಿಹಾಳ: ತಾಲೂಕಿನ ನಿಡಗುಂದಿ ವ್ಯಾಪ್ತಿಯ ಬಳಬಟ್ಟಿ ಗ್ರಾಮ ಪಂಚಾಯತಿಯ ದ್ವಿತೀಯ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಶಾಂತಾ ಜಯಪ್ಪ ದಡ್ಡಿ ಅವರು ಅಧ್ಯಕ್ಷರಾಗಿ ಹಾಗೂ ದುರ್ಗವ್ವ ಚಂದ್ರಶೇಖರ ಮಾದರ ಅವರು ಉಪಾಧ್ಯಕ್ಷರಾಗಿ ಭರ್ಜರಿ ಜಯ ಸಾಧಿಸಿದ್ದಾರೆ.

**ಚುನಾವಣಾ ಕಣದ ವಿವರ:** ಒಟ್ಟು 11 ಸದಸ್ಯ ಬಲದ ಬಳಬಟ್ಟಿ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದ ತೀವ್ರ ಪೈಪೋಟಿಯ ಚುನಾವಣೆಯಲ್ಲಿ ಶಾಂತಾ ಜಯಪ್ಪ ದಡ್ಡಿ ಅವರು 6 ಮತಗಳನ್ನು ಪಡೆಯುವ ಮೂಲಕ ವಿಜಯ ಪತಾಕೆ ಹಾರಿಸಿದರು. ಇವರ ವಿರುದ್ಧ ಸ್ಪರ್ಧಿಸಿದ್ದ ಶಂಕ್ರಮ್ಮ ಬಸಪ್ಪ ಹುಲ್ಲಳ್ಳಿ ಅವರು 5 ಮತಗಳನ್ನು ಪಡೆದು ಪರಾಭವಗೊಂಡರು.

ಅದೇ ರೀತಿ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ದುರ್ಗವ್ವ ಚಂದ್ರಶೇಖರ ಮಾದರ ಅವರು 7 ಮತಗಳನ್ನು ಪಡೆಯುವ ಮೂಲಕ ಜಯ ಸಾಧಿಸಿದರು. ಇವರ ವಿರುದ್ಧ ಸ್ಪರ್ಧಿಸಿದ್ದ ಚಂದ್ರಪ್ಪ ಸಂಜೀವಪ್ಪ ಪೂಜಾರಿ ಅವರು 4 ಮತಗಳನ್ನು ಪಡೆದು ಸೋಲೊಪ್ಪಿಕೊಂಡರು. ನಿಡಗುಂದಿ ತಾಲೂಕು ಪಂಚಾಯತಿ ಇಒ ಹಾಗೂ ಚುನಾವಣಾಧಿಕಾರಿ ವೆಂಕಟೇಶ್ ವಂದಾಲ ಅವರು ನೂತನ ಪದಾಧಿಕಾರಿಗಳ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು.

**ಸಿಹಿ ಹಂಚಿ, ಪಟಾಕಿ ಸಿಡಿಸಿ ವಿಜಯೋತ್ಸವ:** ಆಯ್ಕೆಯ ಘೋಷಣೆಯಾಗುತ್ತಿದ್ದಂತೆ ಪಂಚಾಯತಿ ಆವರಣದಲ್ಲಿ ನೆರೆದಿದ್ದ ನೂರಾರು ಬೆಂಬಲಿಗರು ಮತ್ತು ಗ್ರಾಮಸ್ಥರು ಹರ್ಷೋದ್ಗಾರ ಮಾಡಿದರು. ನೂತನ ಅಧ್ಯಕ್ಷ-ಉಪಾಧ್ಯಕ್ಷರಿಗೆ ಹೂಮಾಲೆ ಹಾಕಿ ಅಭಿನಂದಿಸಿದ ಕಾರ್ಯಕರ್ತರು, ಬೃಹತ್ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು. ಜಯಕಾರದ ಘೋಷಣೆಗಳು ಗ್ರಾಮದ ತುಂಬೆಲ್ಲ ಮೊಳಗಿದವು. ಈ ಚುನಾವಣಾ ಪ್ರಕ್ರಿಯೆಯಲ್ಲಿ ಬಳಬಟ್ಟಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನಿಂಗಣ್ಣ ದೊಡ್ಡಮನಿ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಈ ಸಂದರ್ಭದಲ್ಲಿ ಗ್ರಾ.ಪಂ ಸದಸ್ಯರಾದ ಹಣಮವ್ವ ದೊಡ್ಡಬಸಪ್ಪ ಗಣಿ, ಯಲಗೂರೇಶ ಸಂಗಪ್ಪ ಅರಮನಿ, ಮಲ್ಲಿಕಾರ್ಜುನ ಶಿವಪ್ಪ ಹುಗಾರ, ಮಂಜುಳಾ ರೇವಣಸಿದ್ದಪ್ಪ ದಡ್ಡಿ, ಪ್ರಮುಖರಾದ ನಿಂಗಪ್ಪ ಗಣಿ, ಹಣಮಂತ ಹುಗ್ಗಿ, ಗ್ಯಾನಪ್ಪ ಮಾದರ, ರಾಘವೇಂದ್ರ ದಡ್ಡಿ, ಶ್ರೀ ಶೈಲಗೌಡ ಪಾಟೀಲ (ಹೊಳೆ ಮಸೂತಿ), ಕಾಳಗಿ ಉಪಾಧ್ಯಕ್ಷ ಕೃಷ್ಣಪ್ಪ ಮೋತಪ್ಪ ಚವ್ಹಾಣ,ರಾಮನಗೌಡ ಪಾಟೀಲ,ಉದಯಕುಮಾರ ದೇಸಾಯಿ, ರಾಜು ದೇಸಾಯಿ,ಜಯರಾಮ ಅರಮನಿ,ಶಶಿಕಾಂತ ಪಾಟೀಲ,ಭೀಮಣ್ಣ ದಡ್ಡಿ, ನಿಂಗಪ್ಪ ದಡ್ಡಿ,ಗದ್ದೆಪ್ಪ ಮಾದರ, ಜಯಪ್ರಭು ದಡ್ಡಿ, ಯಮನಪ್ಪ ಗಣಿ, ಸುನಿಲಕುಮಾರ್ ಮಜ್ಜಗಿ, ಎನ್.ಎಚ್. ಇಟಗಿ, ಸೇರಿದಂತೆ ಸುತ್ತಮುತ್ತಲಿನ ನೂರಾರು ಗ್ರಾಮಸ್ಥರು ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307 . Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI , KARNATAKA - 590001